

ಅಪರಂಜಿ

ಸಂಪುಟ-೧
ಸಂಚಿಕೆ-೮
ಮೇ ೧೯೮೪

ತಿಳಿನಗೆಯ ಕಾರಂಜಿ

ಈ ಸಂಚಿಕೆಯ ಲೇಖಕರು

ಪ್ರಕಾಶ್,
ಆರ್. ಎಸ್. ನಾಗಭೂಷಣ್,
ಕಪಟಕವಿ,
ಬಿ.ಎಸ್. ಚಂದ್ರಶೇಖರ್,
ಕೇಷ್ಟ,
ಟೀಪಿ,
ಲೀಲಾ ಮಿರ್ಜೆ,
ರಮ್ಯ,
ಶಿವಕುಮಾರ್,
ಶೀನೂ ಮತ್ತು ಇತರರು

ಗೌರವ ಸಂಪಾದಕೀಯ ಸಲಹೆಗಾರ : ಅ.ರಾ.ಸೇ.
ಸಂಪಾದಕ : ಆರ್. ಶೇಷಗಿರಿರಾವ್
ನಿರ್ವಹಣೆ : ಶಿವಕುಮಾರ್

ಮಾಸ್‌ಕಾಟ್ ಆಗ್ರೋ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್

93, 3ನೇ ಘಟ್ಟ,
ಪೀಣ್ಯ ಇಂಡಸ್ಟ್ರಿಯಲ್ ಏರಿಯಾ,
ಬೆಂಗಳೂರು - 560 058

ದೂರವಾಣಿ : 38902 ತಂತಿ : 'ಮಾಸ್‌ಕಾಟ್' ಟೆಲೆಕ್ಸ್ : 845-580

ಅಪರಂಜಿ

ಗೌರವ ಸಲಹೆಗಾರರು	ಪ್ರಕಾಶಕರು ಮತ್ತು ಸಂಪಾದಕರು
ಶ್ರೀ ಅ.ರಾ.ಸೇ.	ಶ್ರೀ ಶೇಷಗಿರಿ
ಶ್ರೀ ಶಿವಕುಮಾರ್	

ವಾರ್ಷಿಕ ಚಂದಾ : ರೂ. 25-00

ಮುದ್ರಣ

ಬೃಂದಾವನ ಮುದ್ರಣ, ಜಯನಗರ, ಮೈಸೂರು-14

ಮನವಿ

ಕೊರವಂಜಿ, ಅಪರಂಜಿಯೊಡನೆ ನಾಡಿಗೆ ಬಂದಿದ್ದಾಳೆ. ಕೊರವಂಜಿ ಬಳಗದವರು, ಹೊಸ ಲೇಖಕರೊಂದಿಗೆ ನಿಮಗಾಗಿ ತಿಳಿನಗೆಯ ಹೊನಲನ್ನು ಹರಿಸುತ್ತಾರೆ. ಸದ್ಯಕ್ಕೆ ಚಂದಾದಾರರಿಗೆ ಮಾತ್ರ ಅಪರಂಜಿ ಲಭ್ಯ. ವಾರ್ಷಿಕ ಚಂದಾ ರೂ. 25-00 ನೀವೂ, ನಿಮ್ಮ ಮಿತ್ರರೂ ಚಂದಾದಾರಾಗಿರಿ; ಜಾಹಿರಾತು ಕೊಡಿ. ಲೇಖಕರೂ, ವ್ಯಂಗ್ಯ ಚಿತ್ರಕಾರರೂ ತಮ್ಮ ಕೃತಿಗಳನ್ನು ಕಳಿಸಿಕೊಡಲು ಪ್ರಾರ್ಥನೆ. ಅಪರಂಜಿ ನಿಮ್ಮದು. ಅದರ ಅಭಿವೃದ್ಧಿ ನಿಮಗೆ ಸೇರಿದ್ದು. ಚಂದಾ ಹಣವನ್ನು ಮನಿಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕಳಿಸಿಕೊಡಿ.

ಆರ್. ಶೇಷಗಿರಿರಾವ್
ದುರ್ಗಾಲಯ, ವಿ.ಪಿ. ವಿಸ್ತರಣ,
ಚಿತ್ರದುರ್ಗ-೫೭೭೫೦೧

ಅಪರಂಜಿ

ಸಂಪುಟ-೧   ಮೇ-೧೯೮೪   ಸಂಚಿಕೆ-೮

ಈಶ್ವರನು ಯಾರ ಪಾಪವನ್ನಾಗಲೀ ಪುಣ್ಯವನ್ನಾಗಲೀ ತೆಗೆದುಕೊಳ್ಳುವುದಿಲ್ಲ. ತತ್ತ್ವ ಜ್ಞಾನವು ಅಜ್ಞಾನದಿಂದ ಮರೆಯಾಗಿರುವುದರಿಂದ ಪ್ರಾಣಿಗಳು ಸಂಸಾರವೆಂಬ ಗ್ರಹ ಹಿಡಿದು ಭ್ರಮಿಸುತ್ತಿವೆ. (ಗೀತಾ-೫)

ಅಪರಂಜಿಯು
ಯುಗಾದಿ
ಸಂಚಿಕೆ
ನಿಮ್ಮ ಮೆಚ್ಚುಗೆಗೆ
ಪಾತ್ರವಾಗಿದೆಯೆಂದು
ಭಾವಿಸುತ್ತೇವೆ.
ಲೇಖಕರು,
ಓದುಗರು
ತಮ್ಮ ಪ್ರತಿಕ್ರಿಯೆಯನ್ನು
ಬರೆದು
ತಿಳಿಸಬೇಕೆಂದು
ಕೋರುತ್ತೇವೆ.
ಬರಹಗಾರರು
ಲೇಖನಗಳನ್ನು
ಕಳಿಸಲು
ಪ್ರಾರ್ಥನೆ.
ಚಂದಾದಾರರು
ತಮ್ಮ ಒಬ್ಬ
ಮಿತ್ರರನ್ನಾದರೂ
ಚಂದಾದಾರರನ್ನಾಗಿಸಿದರೆ
ಅಪರಂಜಿ
ತನ್ನ ಕಾಲಮೇಲೆ
ತಾನು ನಿಲ್ಲಲು
ಸಾಧ್ಯವಾದೀತು,

—ಸಂಪಾದಕ

ಈ ಸಂಚಿಕೆಯಲ್ಲಿ

ಅಪರಂಜಿ ಕಿಡಿ

—ಪ್ರಕಾಶ್

---

1. ಈಚಿನ ಭೂಕಂಪದ ಬಗ್ಗೆ ಭೂ ವಿಜ್ಞಾನಿಗಳ ಅಭಿಪ್ರಾಯ ಭೂವಿಜ್ಞಾನ ಇಲಾಖೆಯ ಅಭಿಪ್ರಾಯವಲ್ಲ.

—ನಿರ್ದೇಶಕರು

ಈ ಹೇಳಿಕೆಯಿಂದ ಇಲಾಖೆಯಲ್ಲೇ ಮತ್ತೆ ಭೂಕಂಪವಾಯಿತೇನೋ !

2. ಭಾರತದಲ್ಲಿ ಬೀಜಗಳಿಲ್ಲದ ದ್ರಾಕ್ಷಿ ಬೆಳೆಯುವುದನ್ನು ಕೇಳಿ ಫ್ರೆಂಚ್ ವೈನ್ ತಯಾರಕರು ಅಚ್ಚರಿಪಟ್ಟರಂತೆ.

—ಸುದ್ದಿ

ಪಾಪ, ತಿರುಳಿಲ್ಲದಿರುವುದನ್ನು ಸಾಧಿಸುವುದರಲ್ಲಿ ನಾವು ನಿಷ್ಣಾತರೆಂದು ಅವರಿಗೇನು ಗೊತ್ತು ?

3. ಮೈಸೂರಿನಲ್ಲಿ ಭಾಷಾಂತರ ಕೇಂದ್ರ ಸಂಭವ.

—ಪತ್ರಿಕೆ

ಇದರ ವ್ಯಾಪ್ತಿಯಲ್ಲಿ ಕ್ಲಿಷ್ಟ ಕನ್ನಡವೂ ಸೇರುವುದೆಂದು ಆಶಿಸೋಣ !

4. ಬಾಹ್ಯಾಕಾಶದಲ್ಲಿ ಯೋಗಾಭ್ಯಾಸ.

—ಸುದ್ದಿ

ಅಲ್ಲಿ ನಾನೂ ಶಿರಸಾಸನ ಮಾಡಬಹುದು ಅಂತ ನಮ್ಮ ಠೊಣಪ ಸ್ನೇಹಿತನೊಬ್ಬನ ಪ್ರತಿಕ್ರಿಯೆ !

5. ಜೇನುನೊಣಗಳ ಧಾಳಿಯಿಂದ ಪ್ರಧಾನಿಯವರ ಗೃಹದಲ್ಲಿ ಸಮಾರಂಭ ರದ್ದು

ರಾಣಿಜೇನಿಗೆ ಮತ್ತೊಬ್ಬ ರಾಣಿಯನ್ನು ಕಂಡರೆ ರೋಷವೇನೋ ?

6. ಕರ್ನಾಟಕದಲ್ಲಿ ಸುಮಾರು 300 ಮಂದಿ ಮಹಿಳಾ ಲಾಯರುಗಳಿದ್ದಾರೆ.

—ದಿನಪತ್ರಿಕೆ

ತೊಟ್ಟಿಲು ತೂಗುವ ಕೈ ತಕ್ಕಡಿ ಹಿಡಿಯಲಾರದೆ?

7. ಮುಖ್ಯಮಂತ್ರಿಗಳಿಗೆ ಪದೇ ಪದೇ ಗಂಟಲುನೋವು

ವಿಧಾನಸಭೆ ಹವೆ ವಿರೋಧವಾಯಿತೇನೋ !

8. ತೈಲ ಕಂಪನಿಗೆ ಕೋಟಿ ರೂ. ವಂಚನೆ.

—ಸುದ್ದಿ

ಎಣ್ಣೆ ಬಂದಾಗ ಯಾರೋ ಕಣ್ಣು ಮುಚ್ಚಿದ್ದಂತೆ ಕಾಣುತ್ತದೆ !

ವ್ಯವಹಾರ ಸೂತ್ರಗಳು

—ಆರ್.ಎಸ್. ನಾಗಭೂಷಣ್

6) ಸಾರು ಕೆಟ್ಟಿದ್ದರೆ ಉಪ್ಪು ಹೊಯ್ದು ಬಡಿಸಿ.

ವಿವರಣೆ : ನೀವು ಬಾಸ್ ಎಂದಿಟ್ಟುಕೊಳ್ಳೋಣ. ನಿಮ್ಮ ಕೆಳಗಿನವರಿಗೆ ಒಂದು ಗಂಟೆ ಭಾಷಣ ಬಿಗಿದಿದ್ದೀರಿ, ಉಗಿದಿದ್ದೀರಿ. ನಿಮ್ಮ ಭಾಷಣ utter rubbish ಎಂದು ನಿಮಗೂ ನಿಮ್ಮ ಅಸಿಸ್ಟೆಂಟಿಗೂ ಗೊತ್ತು. ಆಮೇಲೆ ಹೀಗೆ ಹೇಳಿ. "ಏಕೆ ಮುಖ ಇಳಿ ಬಿಟ್ಟಿರಿ? ನಿಮ್ಮ ಪ್ರತಿಕ್ರಿಯೆ ಗಮನಿಸಲು ಹಾಗೆ ಹೇಳಿದೆ ಅಷ್ಟೆ. ಅದನ್ನೇಕೆ ಅಷ್ಟು ಸೀರಿಯಸ್ ಆಗಿ ತೆಗೆದುಕೊಂಡಿರಿ. ನೀವು ನಿಜವಾಗಿಯೂ fool ಹೌದೇ?"

ಕಟುಸತ್ಯವೇನೆಂದರೆ ಬಾಸ್ ಒಬ್ಬನೇ ಹೇಳುವವನು, ನಿಮಗೆ ಹೇಳಲು ಏನಿದ್ದರೂ ಹೇಳಲು ಸಾಧ್ಯವಿಲ್ಲ.

7) ಅಧಿಕಾರ ಯಾರಲ್ಲಿದೆಯೋ ಸರಿಯಾಗಿ ಗುರುತಿಸಿ. ಅವನೆಂದದ್ದಕ್ಕೆ ಗೋಣು ಹಾಕಿ, ಅವನಂತೆ ಉಡುಪು ಧರಿಸಿ, ಅವನೊಡನೆ ತಿನ್ನಿರಿ, ಕುಡಿಯಿರಿ, ಅವನು ಒಪ್ಪುವಲ್ಲಿ ವಾಸಿಸಿ.

ನಿಜವಾದ ಅಧಿಕಾರವಿರುವವನು ಹೇಳಿದ್ದಕ್ಕೆಲ್ಲಾ ಗೋಣು ಹಾಕಿ. ಅವನಂತೆ ಉಡುಪು ಧರಿಸಿ, ತಿನ್ನಿರಿ, ಕುಡಿಯಿರಿ. ಮಾಗಿಲುಹಳ್ಳಿಯಲ್ಲಿ ಸ್ವಪ್ನಸುಂದರಿ ವಿಸ್ತರಣದಲ್ಲಿ ವಾಸಿಸಿ. ಬೆಂಗಳೂರಾದರೆ ಪ್ಯಾಲೇಸ್ ಆರ್ಚರ್ಡ್ಸ್‌ನಲ್ಲಿ.

8) ರಕ್ಷಣಾತ್ಮಕ ಮ್ಯಾನೇಜ್‌ಮೆಂಟ್ ಅಭ್ಯಸಿಸಿ.

ಪೋಸ್ಟ್‌ಮಾಸ್ಟರಾಗಿರುವುದಕ್ಕಿಂತ ಪೋಸ್ಟ್ ಗುಮಾಸ್ತನೋ, ಪೋಸ್ಟ್‌ಮನ್ನೋ ಆಗಿರುವುದು ಲೇಸು. ಹೆಡ್‌ಮಾಸ್ಟರಾಗಿರುವುದಕ್ಕಿಂತ ಅಸಿಸ್ಟೆಂಟ್‌ಗಿರಿ ಲೇಸು.

'ಕೈ ಕೆಸರಾದರೆ ಬಾಯ್ಮೊಸರು' ಎಂಬ ಗಾದೆ ಇನ್ನೊಬ್ಬರಿಗೆ ಹೇಳಲು ಸೊಗಸು. ಕೈ ಕೆಸರು ಮಾಡಿಕೊಳ್ಳದೆ ಬಾಯಿ ಮೊಸರು ಮಾಡಿಕೊಳ್ಳುವವರ ಸಂಖ್ಯೆಯೇ ಹೆಚ್ಚು, ಜವಾಬುದಾರಿ ಹೊತ್ತರೆ, ವಿಫಲತೆ ನಿಮಗೆ ಮಾರಕವಾಗುತ್ತದೆ, ಆದುದರಿಂದ ನಿಮ್ಮ ಸಹಕಾರವನ್ನು ಇನ್ನೊಬ್ಬರಿಗೆ ಕೊಡಿ, ಗೆಲುವು ಮಾತ್ರ ನಿಮ್ಮಿಂದಲೇ ಸಾಧ್ಯವಾಯಿ

ತೆಂದು ಕೊಟ್ಟಿಕೊಳ್ಳಿ.

ಪ್ರಮೋಷನ್ ಬೇಕೆಂದು ಒತ್ತಾಯಿಸಿ. ಜವಾಬ್ದಾರಿಗೆ ಹೆಗಲು ಕೊಡಬೇಡಿ.

9) ಹೊತ್ತು ಬಂದಂತೆ ಕೊಡೆ ಹಿಡಿಯಿರಿ.

ಯಾವುದೇ ಆಡಳಿತದ ಉನ್ನತ ಅಧಿಕಾರ ವರ್ಗದಲ್ಲಿ ಶೇ. ೨೫ ಬದಲಾವಣೆ ಆಗಾಗ ಅನಿವಾರ್ಯ. ವಿವಾದದ ಫಲವಾಗಿ ಬದಲಾವಣೆಗಳಾಗುತ್ತವೆ ಅಥವಾ ಬದಲಾವಣೆಗಳು ವಿವಾದಗಳನ್ನು ಹುಟ್ಟಿಹಾಕುತ್ತವೆ. ಆದ ಬದಲಾವಣೆಗೆ ಹೊಂದಿಕೊಳ್ಳಿ. ಯಾವುದೇ ಇತರ ಅಂಶಕ್ಕೆ ಗಮನ ಕೊಡದೆ, ಅರ್ಜುನನಂತೆ ಏಕಾಗ್ರಚಿತ್ತದಿಂದ ನಿಮ್ಮ ಬಡ್ತಿಯನ್ನೇ ಗುರಿಯಾಗಿಡಿ. ಹೊಂದಿಕೆ ಮಾಡಿಕೊಳ್ಳದಿದ್ದರೆ ನೀವೂ ಬದಲಾವಣೆಯ ಸುಳಿಗೆ ಸಿಲುಕುತ್ತೀರಿ, ನೆಗಡಿಯಾಗಿದೆ ಕರ್ಚೀಫುಗಳು ಬೇಕೆಂದು ಜಾಹಿರಾತು ಕೊಡಬೇಡಿ.

10) ಪಂದ್ಯ ಗೆಲ್ಲುವ ಭರದಲ್ಲಿ ಕಾಲುಳಿಕಿಸಿಕೊಳ್ಳಬೇಡಿ.

ಅಂಕಿ ಅಂಶ, ನಿಗದಿತ ಗುರಿಗಳನ್ನು ಸಾಧಿಸಲು ಹೋಗಿ ಕಷ್ಟಕ್ಕೆ ಸಿಲುಕಿಕೊಳ್ಳಬೇಡಿ. ಅಂಕಿಅಂಶಗಳನ್ನು ಸೃಷ್ಟಿಸಬಹುದು.

ಉದಾ : ಐದು ಸಾವಿರ ಜನರು ನೋಡಿದರು ಎನ್ನುವುದರ ಬದಲು ಹತ್ತುಸಾವಿರ ಕಣ್ಣುಗಳು ಕಂಡವು ಎನ್ನಬಹುದು.

ಅಂಕಿಅಂಶಗಳ ದಾಹದಿಂದ ಸಾಧನೆ ಸೊರಗುತ್ತದೆ. ಖರ್ಚನ್ನೇ ಗುರಿಯಾಗಿಟ್ಟುಕೊಂಡಾಗ ಎಕ್ಸ್‌ಪೆಂಡಿಚರ್ ಓರಿಯಂಟೆಡ್ ಫಿಗರ್ಸ್ ಸಿಗುತ್ತವೆ. ಕೆಲಸ ಆದರೆಷ್ಟು, ಬಿಟ್ಟರೆ ಎಷ್ಟು? ಖಾಸಗೀ ವಲಯಕ್ಕೆ ಇದು ಕೈಗೆಟುಕದ ತಾರೆ. ಆ ಖಾಸಗೀ ವಲಯಕ್ಕೆ ಇದು ಅಮೃತ ಗುಳಿಗೆ.

ನಿಷ್ಕೃಷ್ಟ ಗುರಿಯನ್ನು ತಲುಪುವುದು ಪರ್‌ಫಾರ್‌ಮನ್ಸ್ ಓರಿಯಂಟೆಡ್, ಅ-ಖಾಸಗೀ ವಲಯದಲ್ಲಿ ಇದು ಅಪ್ರಸ್ತುತ, ಅರ್ಥಹೀನ. ಖಾಸಗೀ ವಲಯದಲ್ಲಿ ಇದಕ್ಕೇ ಪ್ರಾಧಾನ್ಯ.

ಆದರೆ ನೆನಪಿಡಿ. ಮುಂದಿನ ವಾಹನವನ್ನು ಹಿಂದಕ್ಕೆ ದೂಡುವ ಭರದಲ್ಲಿಯೇ ಅಪಘಾತಗಳು ಸಂಭವಿಸುವುದು.

ಇಪ್ಪತ್ತನೇ ಶತಮಾನದ ದುಸ್ವಪ್ನವೆಂದರೆ ಅಂಕಿ-ಅಂಶಗಳು.

ಮೊಪೆಡ್ ತರುಣಿ

—ಕಪಟಕವಿ

ಯಾರಿವಳು ಮನಮೋಹಿನಿ ?
ವೇಗಗಾಮಿನಿ, ಚೀಲಧಾರಿಣಿ,
ಕೆದರು ಕೇಶಿನಿ, ಶೋಭಿನಿ,
ಹೊಳೆವ ಮೊಪೆಡ್ ರೋಹಿಣಿ,
ಅಗ್ದಿ ನೂತನ ಕಾಮಿನಿ ? ।೧।

ಎರಡು ಬದಿಯಲು ಆಟೊ ಧಾಳಿ
ಹಿಂದೆ ಮುಂದೆ ಲಾರಿ ಧೂಳಿ,
ನುಗ್ಗಿ ಬರುವುದು ಶ್ವಾನದವಳಿ,
ಆದರೋ ಸ್ಥಿತಪ್ರಜ್ಞಳೀ
ಮಧ್ಯೆ ಚಲಿಸುವ ಪುತ್ಥಳಿ ? ।೨।

ಇಕ್ಕೆಲಗಳಲು ಯುವ ಸಮೂಹ.
ಮೆಚ್ಚು ನೋಟದ ಚಕ್ರವ್ಯೂಹ
ತರುಣ ಮನದೊಳು ಕ್ಷಿಪ್ರ ಮೋಹ ;
ದೂರ ಕಾದಿಹ ಮಿತ್ರ ನೇಹ,
ಮೋಪೆಡ್ ರಮಣಿಗೊ ವೇಗ ದಾಹ ।೩।

(ಸಲ್ಲದ ಕನಸನು ಕಾಣುತ ಯುವಜನ
ಮೆಲ್ಲನೆ ಚದುರಿದರು !)

ಸಿನಿಮಾ ! ಸಿನಿಮಾ !!

ಹೆಸರಿನ ವಿಮರ್ಶೆ **ಬಿ. ಎಸ್. ಚಂದ್ರಶೇಖರ್**

(ಈಗಾಗಲೇ ಎಲ್ಲರಿಗೂ ಗೊತ್ತಿರುವಂತೆ 1984 ಕನ್ನಡ ವಾಕ್ಚಿತ್ರದ ಸುವರ್ಣ ವರ್ಷ. ಎಲ್ಲಾ ಪತ್ರಿಕೆಗಳವರೂ ಸಿನಿಮಾ ಬಗೆಗೆ ಇಷ್ಟೊಂದು ಬರೆಯುತ್ತಿರುವಾಗ ನಾವು ಹೇಗೆ ಸುಮ್ಮನಿರಲು ಸಾಧ್ಯ ? ಒಂದು ವಿಶೇಷ ಲೇಖನ ಬರೆಯಲು ನಮ್ಮ ಮದ್ರಾಸ್ ಪ್ರತಿನಿಧಿಯನ್ನು ಕೇಳಿದೆವು. ಆದರೆ ನಮ್ಮ ದುರಾದೃಷ್ಟ. ಅವರು ಒಂದು ಹೂವಿನ ಹೆಸರು ಬರೆದು ಕಳುಹಿಸುವವರಿಗೆ (5 ರೂ ಪೋಸ್ಟಲ್ ಆರ್ಡರ್ ಜೊತೆ ಮೂರು ವರ್ಷದ ಭವಿಷ್ಯ ಕಳುಹಿಸುವ ಬಾಬತ್ತಿನವರಂತೆ. ಸಿನಿಮಾ ಹೆಸರು ಕೇಳಿಯೇ ಅದರ ಬಗೆಗೆ ಕಗ್ಗ ಹೊಸೆದಿದ್ದಾರೆ. ಮುಂಚೆಯೇ ಮಾತು ಕೊಟ್ಟಿರುವುದರಿಂದ ಇದನ್ನು ಪ್ರಕಟಿಸದೆ ವಿಧಿಯಿಲ್ಲ. ಇನ್ನೊಬ್ಬರ ಮೇಲೆ ಬೇಕೆಂದೇ ಕತೆ ಬರೆಯುವವರು ಹೇಳಿ ಕೊಳ್ಳುವಂತೆ, ಇಲ್ಲಿನ ವಿವರಣೆಗೂ ಆ ಹೆಸರಿನ ಸಿನಿಮಾಗಳಿಗೂ ಏನಾದರೂ ಸಂಬಂಧ ವಿದ್ದರೆ ಅದು ಕೇವಲ ಆಕಸ್ಮಿಕ ಎಂದು ಹೇಳಿ ನಮ್ಮ ಜವಾಬ್ದಾರಿಯಿಂದ ಕೈತೊಳೆದು ಕೊಳ್ಳುತ್ತಿದ್ದೇವೆ)

ಉಯ್ಯಾಲೆ : ರಾಜಕೀಯ ವಸ್ತುವಿನ ಚಿತ್ರ. ಇದು ಬಿಡುಗಡೆಯಾದ ಸಂದರ್ಭದಲ್ಲಿ ಉತ್ತರ ರಾಜ್ಯಗಳಲ್ಲಿ ರಾಜಕೀಯ ಪಟುಗಳಲ್ಲಿ, ಅಲ್ಲಿಂದ ಇಲ್ಲಿಗೆ ಜಿಗಿಯುವ ಉಯ್ಯಾಲೆ ಯಾಟ ತುಂಬಾ ಜನಪ್ರಿಯವಾಗಿತ್ತು. ಈ ಆಟದಲ್ಲಿ ಭಾಗವಹಿಸುವವರು ಇಂದಿನ ಕ್ರಿಕೆಟ್ ಆಟಗಾರರಿಗಿಂತ ಹೆಚ್ಚು ಹಣ ಗಳಿಸುತ್ತಿದ್ದರು ಎನ್ನುವುದನ್ನು ಜ್ಞಾಪಿಸಿ ಕೊಳ್ಳಬಹುದು. ಈ ಆಟವನ್ನು ಕರ್ನಾಟಕದಲ್ಲೂ ಜನಪ್ರಿಯಗೊಳಿಸಲು ದಹಲಿ ಯಿಂದ ಬಂದವರು ಈಚೆಗೆ ಪ್ರಯತ್ನಿಸಿದರು, ಆದರೆ ಈ ಉಯ್ಯಾಲೆಯಾಟದಲ್ಲಿ ಪ್ರೇಕ್ಷಕರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರಿಂದ ಆಟದ ಮೋಜು ಹೋಯಿತು. ಅಂದರೆ ಈ ದಂಡೆಯಿಂದ ಆ ಕಡೆಗೆ ಹೋದವರ ಮೇಲೆ ಈ ದಂಡೆಯ ಜನ ಮರಳು, ಕಲ್ಲು ತೂರಿದರು. ಆ ಕಡೆಯಿಂದ ಈ ಕಡೆ ಬಂದವರಿಗೂ ಇದೇ ಶಾಸ್ತ್ರಿಯಾಯಿತು. ಸ್ವಾಭಾವಿಕವಾಗಿಯೇ ಆಟಗಾರರಿಗೆ ಇದರಿಂದ ನಿರಾಶೆಯಾಗಿದೆ. ಈ ಆಟದ ಬಗೆಗೆ ಮತ್ತೆ ಆಸಕ್ತಿ ಕುದುರಬಹುದೆಂದು ಆಗ ಈ ಸಿನಿಮಾ ಮಾತ್ರ ಜನಪ್ರಿಯವಾಗಬಹು ದೆಂದು ಬಲ್ಲವರು ಹೇಳುತ್ತಿದ್ದಾರೆ.

ಗೆಜ್ಜೆಪೂಜೆ : ವಿಶ್ವದ ಅತಿ ಪುರಾತನ ವೃತ್ತಿಯಲ್ಲಿ ತೊಡಗಬೇಕಾಗಿ ಬಂದ ಹೆಣ್ಣಿನ ಕತೆ. ಇಲ್ಲಿ 'ಗೆಜ್ಜೆಪೂಜೆ' ಆಚರಣೆಯ ಬಗೆಗಿರುವ ಐತಿಹ್ಯ ಕುತೂಹಲಕಾರಿ. ಎಲ್ಲರಿಗೂ

ಗೊತ್ತಿರುವಂತೆ ಇಂದಿನ ರಸ್ತೆ ರೋಮಿಯೋಗಳನ್ನು ಎದುರಿಸಲು, ಇಂದಿನ ಹುಡುಗಿಯರಿಗೆ ತಮ್ಮ ಪಾದ ರಕ್ಷೆಯೊಂಬ ಆಯುಧವಿದೆ. ಹಿಂದೆ ಎಲ್ಲಾ ಹುಡುಗಿಯರೂ ಪಾದರಕ್ಷೆ ಧರಿಸುತ್ತಿಲ್ಲವಾದ್ದರಿಂದ, ರಕ್ಷಣೆಗೆ ಒಂದು ಉಪಾಯ ಬೇಕಾಗಿತ್ತು. ದೂರ ದೃಷ್ಟಿಯುಳ್ಳ ಬುದ್ಧಿವಂತಜನ ಹುಡುಗಿಯರ ಕಾಲಿಗೆ ದಪ್ಪ ಗೆಜ್ಜೆ ಸರವನ್ನು ಕಟ್ಟುವ ಸಂಪ್ರದಾಯ ಪ್ರಾರಂಭಿಸಿದರು ನಡೆಯುವಾಗ ಗೆಜ್ಜೆ ಬೇಕಾದವರನ್ನು ಆಕರ್ಷಿಸುವಂತೆ ಬಿಚ್ಚಿಕೊಂಡು ಹೊಡೆದಾಗ ಗೆಜ್ಜೆಯಸರ ಉಪಯುಕ್ತ ಆಯುಧವೂ ಆಗಬಲ್ಲದು. ಗೆಜ್ಜೆಸರದಿಂದ ಪೂಜೆ ಪಡೆದವರು ಬಿದ್ದ ಪೆಟ್ಟಿಗಿಂತ ಕೇಳಿದ ಶಬ್ದಕ್ಕೆ ಹೆಚ್ಚು ಗಾಬರಿ ಪಟ್ಟು, ಕೂಡಲೇ ಆಸ್ಪತ್ರೆ ಹುಡುಕಿಕೊಂಡು ಹೋಗುತ್ತಿದ್ದರು. ಏಟಿಗಿಂತ ಶಬ್ದ ಪರಿಣಾಮಕಾರಿಯಾಗುವ ಈ ತಂತ್ರವನ್ನು ಅಂದಿನಿಂದ ಸಿನಿಮಾಗಳ ಸ್ಟಂಟ್ ನಿರ್ದೇಶಕರು ವ್ಯಾಪಕವಾಗಿ ಬಳಸುತ್ತಿದ್ದಾರೆ.

ನಂದಾದೀಪ : ರಾಜಕೀಯಕ್ಕೆ ಚಲನಚಿತ್ರವನ್ನು ಬಳಸಿಕೊಳ್ಳಲು ಪ್ರಯತ್ನಿಸಿ ಪೂರ್ತಿ ಸೋತಿದ್ದಕ್ಕೆ ಒಂದು ಉದಾಹರಣೆ. ಈ ಚಿತ್ರ ಬಂದಾಗ ನಂದಾದೀಪ, ರಾಜಕೀಯ ಪಕ್ಷವೊಂದರ ಚುನಾವಣಾ ಚಿನ್ಹೆಯಾಗಿತ್ತು. ಚಿತ್ರ ಬಿಡುಗಡೆಯಾದ ಕೂಡಲೇ ನಡೆದ ಚುನಾವಣೆಯಲ್ಲಿ, ಆ ಪಕ್ಷ ಸ್ಪರ್ಧಿಸಿದ್ದ ಎಲ್ಲಾ ಕ್ಷೇತ್ರಗಳಲ್ಲೂ ಠೇವಣಿ ಕಳೆದುಕೊಂಡಿತು. ಮುಂದೆ ದೀಪ ಕಮಲದ ಆಕಾರ ಪಡೆಯಿತು ಆಗ ಬಂದ 'ಕೆಸರಿನ ಕಮಲ' 'ಅರಳಿದ ತಾವರೆ', ನಂದಾದೀಪದ ಇತಿಹಾಸವನ್ನು ಮತ್ತೆ ನಿಜ ಮಾಡಿ ತೋರಿಸಿದವು.

ಬೇಡರ ಕಣ್ಣಪ್ಪ : ಇಂದಿನ ಕಲೆ ನಾಳಿನ ಜೀವನ ಎನ್ನುವುದಕ್ಕೆ ನಿದರ್ಶನ ಒದಗಿಸುವ ಚಿತ್ರ. 30ವರ್ಷದ ಹಿಂದೆ ತಯಾರಾದ ಈ ಚಿತ್ರದಲ್ಲಿ ಬೇಡರ ಕಣ್ಣಪ್ಪ, ಶಿವನನ್ನು ಪ್ರಾರ್ಥಿಸುವ ಅತಿ ಜನಪ್ರಿಯ ಗೀತೆಯಿದೆ. ಇಂದು 1984 ರಲ್ಲಿ ಮತ್ತೆ ಇವನ ಜಾತಿಯವರು ತಮ್ಮನ್ನು ಪರಿಶಿಷ್ಟ ವರ್ಗದಲ್ಲೇ ಉಳಿಸಿ ಕಾಪಾಡಪ್ಪ ಎಂದು ಮತ್ತೆ ಶಿವಪ್ಪನನ್ನು ಪ್ರಾರ್ಥಿಸುತ್ತಿದ್ದಾರೆ. ಚಾರಿತ್ರಿಕವಾಗಿ 'ಎಸ್ ಐ ಫಾರ್ ಎಸ್ ಐ' ವಸ್ತುವನ್ನು ಹೊಂದಿದ ಮೊದಲ ಸಿನಿಮಾ. ಇದೇ ವಸ್ತು ವಿವಿಧ ರೂಪಗಳ ನೇಡಿನ ಚಿತ್ರಗಳಿಗೆ ನಾಂದಿಯಾಯಿತು ಎನ್ನುವುದನ್ನು ಚಲನಚಿತ್ರ ಇತಿಹಾಸಕಾರರು ಗುರುತಿಸಿದ್ದಾರೆ. ಇಲ್ಲಿ ನೇತ್ರದಾನದ ಸಮಕಾಲೀನ ವಸ್ತುವೂ ಇದೆ.

ಶುಭಮಂಗಳ : ಶುಭ, ಮಂಗಳ ಎನ್ನುವ ಹೆಸರಿನ ಇಬ್ಬರು ಹುಡುಗಿಯರ ಕತೆ ಈ ಇಬ್ಬರು ಹುಡುಗಿಯರು ಅವಳಿ–ಜವಳಿಗಳಲ್ಲ ಎನ್ನುವುದನ್ನು ಗಮನಿಸಬೇಕು. ಹಾಗಾಗಿದ್ದರೆ ಸಿನಿಮಾ ಹೆಸರು, 'ಉಭ–ಶುಭ' ಅಥವ 'ಅಂಗಳ–ಮಂಗಳ' ಎಂದಿರುತ್ತಿತ್ತು. ಇದು ಮುಖ್ಯವಾಗಿ ಶೈಕ್ಷಣಿಕ ಚಿತ್ರ ಆದರೆ ಯಾವ ಮಟ್ಟದ ವಿದ್ಯಾರ್ಥಿಗಳನ್ನು ಉದ್ದೇಶಿಸುತ್ತದೆ ಎನ್ನುವುದರಲ್ಲಿ ಗೊಂದಲವಿದೆ. ಪ್ರಾರಂಭದಲ್ಲಿ ನಾಲ್ಕರ ಮಗ್ಗಿಯನ್ನು ಹೇಳಿಕೊಡುವ 'ಅಭಿನಯ ಗೀತೆ' ಯಿದೆ ಎವರೆ ಶಿಶುವಿಹಾರದ ಮಟ್ಟ, ಕೊನೆಯಲ್ಲಿ ಸೂರ್ಯ-ಚಂದ್ರರ ವಿರಸ ಅಂದರೆ ಗ್ರಹಣದ ಪಾಠವಿದೆ. ಈ ವಿಷಯವನ್ನು ಹೈಸ್ಕೂಲಿ

ನಲ್ಲಿ ಹೇಳಿಕೊಡ್ತಾರೆ ಎಂದು ನಮ್ಮ ನೆನಪು. ಮಧ್ಯದಲ್ಲಿ ಕಡಲಿನಲ್ಲಿ ದೋಣಿಯನ್ನು ಬಿಡುವ ರೀತಿ ತಿಳಿಸುವ ಇನ್ನೊಂದು ಹಾಡಿದೆ. ಬಹುಶಃ ಇದು ಮೀನುಗಾರಿಕೆಯಲ್ಲಿರುವವರಿಗೆ ಪುರಸ್ಕಾರ ಶಿಕ್ಷಣ ಕೊಡುವ 'ಆಡಿಯೋ ವಿಷುಯಲ್' ಪ್ರಯತ್ನವಿರಬಹುದು.

ಸಂಸ್ಕಾರ : ಈ ಚಿತ್ರದ ಹೆಸರು ನಮಗೆ ಅರ್ಥವಾಗಲಿಲ್ಲ. ಸಂಸ್ಕೃತ ಬಲ್ಲ ಮಿತ್ರರೊಬ್ಬರು ಸಂಸ್ಕಾರ ಎಂದರೆ ಹೆಣವನ್ನು ದಫನ್ ಮಾಡುವ ಅಥವ ಸುಡುವ ಕ್ರಮ ಎಂದು ವಿವರಿಸಿದರು. ಈ ವಿಷಯದ ಚಿತ್ರವಲ್ಲಿ ರೇಪ್ ಹೊಡೆದಾಟ, ಕ್ಲಬ್‌ಡ್ಯಾನ್ಸ್ ಹೇಗೆ ಸೇರಿಸಿರಬಹುದು ಎನ್ನುವ ಕುತೂಹಲ ಸಿನಿಮಾ ನೋಡುವಂತೆ ಮಾಡಿತು. ಇವುಗಳಲ್ಲಿ ರೇಪ್ ಮಾತ್ರ ಇವರಲ್ಲಿ ಬಂದಿದೆ. ಆದರೆ ಅದು ಉಲ್ಟಾ ಆಗಿದೆ. ನಾಯಕಿಯನ್ನು ವಿಲನ್ ಬಲತ್ಕಾರ ಮಾಡುವ ಬದಲು ವಿಲನ್ ಅನ್ನು (!) ನಾಯಕಿಯೆ ಬಲಾತ್ಕರಿಸುತ್ತಾಳೆ. 'ಹೊಸ ಅಲೆ' ಯ ಎಲ್ಲಾ ಸಿನಿಮಾಗಳಲ್ಲಿರುವ ಅನುಕೂಲ ಇಲ್ಲೂ ಇದೆ—ಮುಂದೇನಾಗುತ್ತದೆ ಎಂದು ಕಾತುರಪಡಬೇಕಾಗಿಲ್ಲ. ಮುಂದೆ ಏನೂ ಆಗುವುದಿಲ್ಲ. ಈ ಸಿನಿಮಾ ಅರ್ಥವಾಗಬೇಕಾದರೆ ಕಾದಂಬರಿ ಓದಿರಬೇಕು, ಕಾದಂಬರಿ ಓದಿದ್ದರೆ ಸಿನಿಮಾ ನೋಡುವ ಅಗತ್ಯವಿಲ್ಲ.

ಸ್ಕೂಲ್ ಮಾಸ್ಟರ್ : ಶಾಲಾ ಮಾಸ್ತರು ಅದರಲ್ಲೂ ಹೆಡ್‌ಮಾಸ್ತರು 'ಸ್ವಾಮಿದೇವನೆ' ಹೇಳಿಕೊಡುವುದಲ್ಲದೇ, ಶಾಲೆಯಲ್ಲಿ ಪಾಠವನ್ನೂ ಮಾಡುತ್ತಾರೆ ಎಂದು ನಿರೂಪಿಸುವ ಒಂದಾನೊಂದು ಕಾಲದ ಜಾನಪದ ಕತೆ. ಎಲ್ಲರಿಗೂ ಗೊತ್ತಿರುವಂತೆ ಇಂದು ಮುಖ್ಯೋಪಾಧ್ಯಾಯರಿಗೆ, ತಮ್ಮ ಸಹೋದ್ಯೋಗಿಗಳ ಸಂಬಳ,ಭತ್ಯ, ಹೈದರಾಬಾದ್ ಸ್ಕೇಲ್, 13ನೆಯ ನಿಯಮ, ಶಾಲಾಭಿವೃದ್ಧಿ ಮಂಡಳಿ ಜನಗಣತಿ, ದನಗಣತಿ, ಮಕ್ಕಳಗಣತಿ, ಚುನಾವಣೆ ಮತದಾರರ ಸಂಖ್ಯೆ ಮಧ್ಯಾಹ್ನದ ಉಪ್ಪಿಟ್ಟು, ಮಕ್ಕಳದಿನ, ಶಿಕ್ಷಕರ ದಿನ, ಎ. ಇ. ಒ. ಡಿ. ಡಿ. ಪಿ. ಐ. ತನಿಖೆ ಇಷ್ಟೆಲ್ಲಾ ಕೆಲಸವಿರುವಾಗ ಪಾಠ ಮಾಡಲು ಹೇಗೆ ಸಾಧ್ಯ ? ಅಂದಿನ ಕಾಲದ ಸಿನಿಮಾದಲ್ಲೂ ಶಿಕ್ಷಕರ ವಸತಿ ಸಮಸ್ಯೆ ಇದೆ ಎನ್ನುವ ನಿರೂಪಣೆ ಗಮನಾರ್ಹ. ಆದರೆ ಹಾಡು ಹೇಳಿಕೊಂಡು ಮಕ್ಕಳು ಕಟ್ಟುವ ಮನೆಗೆ ಸಿಮೆಂಟ್, ಕಬ್ಬಿಣದ ಲೈಸನ್ಸ್ ಹೇಗೆ ಹೊಂದಿಸಿಕೊಂಡರು ಎನ್ನುವ ವಿವರವಿಲ್ಲ.

ಹಂಸಗೀತೆ : ಈ ಹೆಸರು ಕೇಳುವವರೆಗೂ ನಾವು, ಹಂಸ ಹೈನುಗಾರಿಕೆ ಇಲಾಖೆಗೆ ಸಂಬಂಧಪಟ್ಟ ಪಕ್ಷಿ. ಹಾಲು-ನೀರು ಬೆರೆಸಿಟ್ಟಾಗ ಹಾಲು ಕುಡಿದು ನೀರು ಬಿಡುವುದಷ್ಟೇ ಇದರ ಉಪಯೋಗ-ಸಂಗೀತದ ಇಲಾಖೆಗೆ ಸಂಬಂಧಪಟ್ಟ ಹಕ್ಕಿಗಳೆಂದರೆ ಕೋಗಿಲೆ, ಕಾಜಾಣ ಎಂದು ತಿಳಿದಿದ್ದೆವು. ಹಂಸವೂ ಗೀತೆ ಬರೆಯುತ್ತದೆ ಎಂದು ಆಮೇಲೆ ತಿಳಿಯಿತು 'ನ್ಯೂವೇವ್' ಸಿನಿಮಾ 'ನ್ಯೂಡ್‌ದೇವ್' ಆಗಿದ್ದಕ್ಕೆ ಇದೊಂದು ಉತ್ತಮ ಉದಾಹರಣೆ ಆದರೆ ಪ್ರೇಕ್ಷಕರ ದುರಾದೃಷ್ಟ ಇಲ್ಲಿ ಬೆತ್ತಲಾಗುವವರು ಮಧ್ಯವಯಸ್ಸಿನ ಬೊಜ್ಜು ಗುತ್ತಿರುವ ಹೊಟ್ಟೆಯ ಗಂಡಸರು. ಈ ಸಂಗೀತಮಯ ಕನ್ನಡ ಚಿತ್ರದಲ್ಲಿ ಒಂದೂ ಕನ್ನಡ ಹಾಡಿಲ್ಲ ಎನ್ನುವುದು ಇದರ ಇನ್ನೊಂದು ವೈಶಿಷ್ಟ್ಯ

ಯಾತ್ರಿಕರ ಪತ್ರ

—ಕೀಫ

ತಳವಾರಂಗಡಿ ಸಿಡಿ ದರ್ಶನದಿಂದ ರಾಜ, ಚಂದಿ ಇಬ್ಬರೂ ತುಂಬ ಖಿನ್ನರಾಗಿ ಹೋಗಿದ್ದರು. ರಾಜ, ಚಂದಿ ಇಬ್ಬರಿಗೂ ಈಗಿನ ಯುವಕ ಯುವತಿಯರಲ್ಲಿ ತುಂಬ ಭರವಸೆ. ಈಗಿನ ಯುವಕ ಯುವತಿಯರು ತುಂಬ ಮುಂದುವರಿದಿದ್ದರೆಂಬ ಭರವಸೆ.

"ನಮ್ಮ ಕಾಲೇಜ್ ಬಾಯ್ಸೆಲ್ಲಾ ಬೀಟಲ್ಸ್‌ನ ಬೀಟ್ ಮಾಡಿ ಬಿಡ್ತಾರೋ" ಅಂತ ರಾಜ ಅಂತಾನೇ ಇರ್ತಿದ್ದ.

"ನಮ್ಮ ಬಾಯ್ಸು ರಘುಪತಿ ರಾಘವ ರಾಜಾರಾಂ ಹಾಡೋದ್ರಲ್ಲಿ ಒಸಿ ಬಿಸ್ನಾ ದೋರಿಗೇ ಮಣ್ಣು ಮುಕ್ಕಿಸ್ತಾರೆ" ಅಂದಿದ್ದ ರಾಜ.

ಆದರೆ ತಳವಾರಂಗಡೀಲಿ ಸಿಡಿ ವೀರಣ್ಣನ್ನ ನೋಡಿದ ಮೇಲೆ ರಾಜ, ಚಂದಿ ಇಬ್ರೂ ಇಂಗು ತಿಂದ ಕುರಿಗಳ ಹಾಗೆ ಅಥವಾ ಮಂಗಗಳ ಹಾಗೋ?— ಆಗಿದ್ದರು. ನಾನೂ ಈ ಸಮಯಕ್ಕೇ ಕಾದಿದ್ದೆ.

"ನೋಡ್ರೋ ಸದಾ ಒಡಮಾಡ್ತಾ ಇರ್ತೀರಲ್ಲಾ –ನಮ್ಮ ಹುಡುಗ ಹುಡುಗೀರು ನಮ್ಮ ಸದಾಚಾರ ಕಲಾಚಾರ ಕುಲಾಚಾರಗಳನ್ನೆಲ್ಲಾ ಬಿಟ್ಬಿಟ್ಟಿದ್ದಾರೇಂತ– ಆ ಇಬ್ರು ಹುಡುಗರು ಹೇಗ್ರೋ ಸಿಡಿ ಆಡೋಕೆ ಒಪ್ಪಿಕೊಂಡ್ರು?" ಅಂದೆ.

"ನೀನೊಬ್ಬ ಈಡಿಯಟ್ ಕಣೋ. ಈ ಜನ ಇನ್ನೂ ನಮ್ಮ ಅಬ್ರೊರಿಜಿನಲ್ ಸಂಪ್ರದಾಯ ಬಿಟ್ಟೇಯಿಲ್ಲ ಅಷ್ಟೆ. ಇಂಥಾ ಜನ ಇಲ್ಲಿದ್ರೂ ಒಂದೆ– ಕಾಂಗೋಲಿದ್ರೂ ಒಂದೆ" ಅಂದ ರಾಜ.

"ಕಾಂಗೋ–ಕಾಂಗ್ಯೆಗಳಿಗೂ ಈ ಸಿಡೀ ಪೀಡೇಗೂ ಸಂಬಂಧ ಏನೋ?" ಅಂದೆ.

"ನೀನು ಗುಗ್ಗು ಚಾಂಪಿಯನ್ ಕಣೋ– ಕಾಂಗೋ ಅಂದ್ರೆ ಅದು ಆಫ್ರಿಕಾದಲ್ಲಿ ಇರೋ ಕ್ಯಾನಿಬಾಲ್ ಕಂಟ್ರಿ ಕಣೋ– ಆ ನಾಡುಗಳಲ್ಲೆಲ್ಲಾ ಈ ರೀತಿ ಸಿಡಿ ನಡೆಯು ತ್ವಂತೆ" ಅಂದ ಚಂದಿ.

ಅದ್ಯಾಕೋ ಏನೋ ಚಂದಿ ಮಾತು ಕೇಳಿದ ಮೇಲೆ ಕಾಂಗೋ ಕಾಂಗ್ಯೆಗಳಲ್ಲೂ ಕ್ಯಾನಿಬಾಲ್ಸ್ ಇದ್ದಾರೆಯೇ? –ಅಂತ ಮನಸ್ಸಿನಲ್ಲಿ ಒತ್ತಿ ಒತ್ತಿ ಬಂತು. ಎಷ್ಟು

ಆದುಮಿ ಹಿಡಿದರೂ ತಡೆಯೋಕೇ ಆಗ್ಲಿಲ್ಲ. ಯಾವ ಹುತ್ತದಲ್ಲಿ ಯಾವ ಹಾವು ಇದೆಯೋ– ಅನ್ನಿಸಿತು.

ತಳವಾರಂಗಡಿ ಬಿಟ್ಟ ಮೇಲೆ ಸಂಜೆ ಹೊತ್ತಿಗೆ ನಾವು ಸೇರಿದ್ದು ಕಂಬ್ಳೀಹಳ್ಳೀನ. ಊರಮುಂದೆ ಕಲ್ಲಿನ ಮೇಲಿದ್ದ ಆ ಹೆಸರನ್ನು ಓದಿ –ಪ್ರಾಯಶಃ ಇಲ್ಲಿ ಒಳ್ಳೆಯ ಕಂಬ್ಳಿಗಳನ್ನ ನೇಯ್ತಾರೆ. ಚೀಪಾಗಿ ಸಿಗುತ್ವೆ –ಅಂದುಕೊಂಡೆ.

"ನಾನೊಂದು ಕಂಬ್ಳಿ ತಕೊಂಡೇ ಬಿಡ್ತೇನ್ರೋ. ನನ್ನ ಮುದ್ವೇಲಿ ನಂಗೆ ಕೊಟ್ಟ ಬೋದು ಕಾಟನ್ ಬೂರ್ನೀಸೇ- ಅಂತ ರಾಜ ಅಂದ.

ನಾವೆಣಿಸಿದ ಹಾಗೆ ಕಂಬ್ಳೀಹಳ್ಳೀಲಿ ಕಂಬ್ಳೀ ಕಾರ್ಖಾನೆ ಕಣ್ಣಿಗೆ ಬೀಳಲಿಲ್ಲ. ಆ ಹೆಸರು ಹೇಗೆ ಬಂತು ?

ಹಿಂದೆ ರಾಮ ಸೀತೆ ಲಕ್ಷ್ಮಣ ವನವಾಸಕ್ಕೆ ಹೊರಟಾಗ ಕೇವಲ ನಾರುಮಡಿ ಉಟ್ಟು ತಾನೇ ಹೊರಟರು? ಆ ಮೂವರು ಈ ಹಳ್ಳಿ ಮಾರ್ಗವಾಗೇ ಹೋದರಂತೆ. ಇಲ್ಲೇ ಸೀತಾದೇವಿಗೆ ವಿಪರೀತ ಚಳಿಜ್ವರ ಬಂದುಬಿಟ್ಟಿತಂತೆ. ಆಗೆಲ್ಲಾ ಮಲೇರಿಯಾ ಅಂತ ಜನಕ್ಕೆ ಗೊತ್ತೇ ಇರ್ಲಿಲ್ಲ. ಆ ಮೂವರು ಇಳ್ಕೊಂಡಿದ್ದ ರೈತನ ಮನೆಯಾಕೆ ಸೀತೆಗೆ ಬೇವಿನ ಕಷಾಯ ಕುಡಿಸಿ ತನ್ನ ಕಂಬ್ಳೀನ ಹೊದ್ದಿಕೊಳ್ಳೋಕೂ ಕೊಟ್ಟಿದ್ದಳಂತೆ. ಮರುದಿನ ಸೀತೆಗೆ ಆ ಕಷಾಯದ ಬಲದಿಂದ್ಲೋ ಜ್ವರ ಚಳಿ ಬಿಟ್ಟುಹೋಯ್ತಂತೆ. ಪುನಃ ಆ ಮೂವರೂ ಊರು ಬಿಡೋಕೆ ಮುಂಚೆ ಸೀತೆ ಆ ರೈತ ಹೆಂಗಸಿನ ಮುಂದೆ ತನ್ನ ಕಥೆಯನ್ನೆಲ್ಲಾ ಹೇಳಿ– ಇನ್ನು ಹನ್ನೆರಡು ವರ್ಷ ಕಳೆದ ಮೇಲೆ ನಿನ್ನ ಅಯೋಧ್ಯೆಗೆ ಕರೆಸ್ತೀನಿ. ಅಲ್ಲಿ ನಿಂಗೆ ಪಟ್ಟೆ ಸೀರೆ ಕೊಡ್ತೀನಿ– ಅಂತ ಭರವಸೆ ಕೊಟ್ಟಳಂತೆ. ಹಾಗೇ ಮಾಡೂ ಮಾಡಿದಳಂತೆ. ಆ ಕಾರಣದಿಂದ್ಲೇ ಆ ಹಳ್ಳಿಗೆ "ಕಂಬ್ಳೀಹಳ್ಳಿ"– ಅಂತ ಹೆಸರಿಟ್ಟರಂತೆ

"ತುಂಬಾ ರೀಸನಬಲ್ ಕಣ್ರೋ. ಈಗಿನ ಹಾಗೆ ಹಿಸ್ಟಾರಿಕಲ್ ಪ್ಲೇಸಸ್‌ಗೆಲ್ಲಾ ನಮ್ಮ ರಾಜಕೀಯ ಹೆಗ್ಗಣಗಳ ಹೆಸರುಗಳನ್ನಿಡೋಕಿಂತ ಮೇಲು" ಅಂದ ಚಂದಿ.

"ಅಥವಾ ಪ್ರತಿದಿನ ಒಂದು ಡಜನ್ ಹಿಟ್ ಅಂಡ್ ರನ್ನೋ -ಚೈನ್‌ಸ್ನಾಚಿಂಗೋ ನಡೀತಿರೋ ರಸ್ತೆಗೆ-ಗಾಂಧಿರಸ್ತೆ- ಅಂತ ನಾಮಕರಣ ಮಾಡೋಕಿಂತ ಮೇಲು" ಅಂದ ರಾಜ.

ನನ್ನ ತಲೇಲಿ ಒಸಿ ಬಿಸ್ಯಾನೇ ಓಡಾಡ್ತಾ ಇದ್ದದ್ದರಿಂದ -'ರಘುಪತಿ ರಾಘವ ರಾಜಾರಾಂ' ಹಾಡನ್ನ ಗುನಗ್ತಾನೇ ಇದ್ದೆ. "ಕನ್ನಡಮಲ್ಲ ಪುಲಿಕೇಶಿ ವೆಜಿಟಬಲ್ ಹೋಟೆಲ್ ಮತ್ತು ಕಾಫಿ ಬಾರ್" ಬೋರ್ಡು ಕಣ್ಣಿಗೆ ಬಡೀತು. ರಾಜ, ಚಂದಿ ಆಗಲೇ ತಮ್ಮ ವಾಹನಗಳನ್ನು ಗೋಡೆಗೆ ಒರಗಿಸಿ ಒಳಗೆ ನುಗ್ಗುತ್ತಿದ್ದರು. ನಾನೂ ನನ್ನ ಸೈಕಲ್ ಗೋಡೆಗೆ ಒರಗಿಸಿ ಕ. ಪು. ವೆ. ಹೋ. ಮ. ಕಾ. ಬಾ.ಗೆ ನುಗ್ಗಿದೆ.

ಆರ್ಥಿಕ ಚಿಂತೆ

ದಾರಿದ್ರ್ಯ ರೇಖೆ- ಅನ್ವೇಷಣೆ

— ಪೀಪಿ

ಚಿಂತೆಗೆ ಸಾಕಾರ ರೂಪ ಬರುವುದು ಸಾಧ್ಯವಿದ್ದರೆ ಅದು ನಾಲ್ಕು ಆಯಾಮ ಗಳಲ್ಲಿ ಎಂ. ನನ್ನು ಹೋಲುತ್ತಿತ್ತೆಂಬುದರಲ್ಲಿ ನನಗೇನೂ ಸಂಶಯವಿಲ್ಲ. ಅಂಥಿಂಥದಲ್ಲದೆ ಏನೋ ಮಹಾ ಪ್ರಮಾದವೇ ಆಗಿರಬೇಕೆಂದು ಸತರ್ಕವಾಗಿ ಊಹಿಸಿದೆ. ನನ್ನ ಊಹೆ ಎಂದೂ ಹುಸಿಯಾಗಿಲ್ಲ. ಅವನೇ ಬಾಯಿ ಬಿಡುತ್ತಾನೆಂದು ಕಿವಿದೆರೆದು ಕೂತೆ. ಸ್ವಲ್ಪ ಸಮಯದ ಅರ್ಥಗರ್ಭಿತ ಮೌನದ ನಂತರ ಎಂ. ನ ತುಟಿ ಬಿರುಕಿತು.

'ಬೋರ್ಡ್ ವಿಚಾರ ಗೊತ್ತಾಯ್ತಾ' ? ಎಂದ.

'ಎಂಥಾ ಬೋರ್ಡ್ ? ನನಗೆ ಗೊತ್ತಿರೋದು ಬ್ಲಾಕ್ ಬೋರ್ಡ್ ಒಂದೆ. ಅದೂ ನಾನು ನಮ್ಮೂರಿನ ಪ್ರೈಮರಿ ಶಾಲೆಯಲ್ಲಿ ಮೊದಲು ನೋಡಿದ್ದು. ಅನಂತರ ನನ್ನ ಶಿಕ್ಷಣದ ವಿವಿಧ ಘಟ್ಟಗಳಲ್ಲಿ ವಿವಿಧ ಗಾತ್ರ ಬಣ್ಣಗಳಲ್ಲಿ......'

'ಸರಿ ಸರಿ ಅದೇ ಬೋರ್ಡ್. ಇನ್ನುಮೇಲೆ ಊರ ನಡುವೆ ಎಲ್ಲರಿಗೂ ಕಾಣುವಂತೆ ಬರಲಿದೆ... ....'

'ವಯಸ್ಕರ ಶಿಕ್ಷಣ ಜಾರಿಗೆ ಬಂತೋ ಹಾಗಾದರೆ ?'

'ಊಹುಂ ... ಎಸ್. ಬಿ. ಚವಾಣ್ ಹೇಳಿರೋ ಪ್ರಕಾರ ಪ್ರತಿ ಹಳ್ಳಿಯಲ್ಲೂ ಅತ್ಯಂತ ಬಡವರ ಪಟ್ಟಿಯನ್ನು ಊರ ಮುಂದಿನ ಬೋರ್ಡ್‌ಗಳಲ್ಲಿ ಬರೆದು ಪ್ರಚಾರ ಮಾಡ್ತಾರಂತೆ.'

'ಸರಿ, ಇನ್ನು ನಮ್ಮ ಮಂತ್ರಿಗಳಿಗೆ ಬಿಡುವಿಲ್ಲ'

'ಹೌದು. ಇಗೋ ನೋಡು. ಇನ್ವಿಟೇಶನ್ ಜಿ. ಎಂ. ಹಳ್ಳಿಯಲಿ ಇಂದು ಸಾಯಂಕಾಲ 6ಗಂಟೆಗೆ ಬಹುಮಾಘ್ಯಮ ಪ್ರಚಾರಾಂದೋಲನದ ಉದ್ಘಾಟನೆ ಮಾಡಲು ಹಾಗೂ ಸ್ಥಳದಲ್ಲೇ ಗ್ರಾಮದ ಬಡವರು, ಕಡುಬಡವರನ್ನು ಗುರುತಿಸಿ ಅವರ ಹೆಸರನ್ನು ದಾರಿದ್ರ್ಯ ರೇಖಾ ಸೂಚಕ ಫಲಕದ ಮೇಲೆ ತಮ್ಮ ಸ್ವಂತ ಅಮೃತ ಹಸ್ತದಿಂದ ಬರೆಯಲು ಮಾನ್ಯ ಪಿಂಜ್ರಾಪೋಲ್ ಖಾತೆಯ ಸಚಿವ ದಯಮಾಡಿ ಒಪ್ಪಿರುತ್ತಾರೆ. ಬಾ ಬಾ. ಹೋಗೋಣ, ಆರೇ ಮೈಲಿ

This is a socio-economically important function lots of material for your study and lots of food for thought on the hungry poor. I dont want to miss and I dont want you to. Come on, get up, ಉತ್ತಿಷ್ಠ ಜಾಗೃತ ! ಎಂದು ಹುರಿದುಂಬಿಸಿದ.

ಕ್ಯಾನ್ ಜಾಂಡಿಸ್‌ನ — ಪಟ್ಟಾಭಿಷೇಕ

ನಾವು ಜಿ. ಎಂ. ಹಳ್ಳಿಯನ್ನು ಸೇರುವಾಗ ಒಂದು ಮೆರವಣಿಗೆ ನಮ್ಮನ್ನು ಎದುರುಗೊಂಡಿತು. ಕೃಶಕಾಯದ ಮಧ್ಯವಯಸ್ಕ ನಗುತ್ತಾ ಕೂತಿದ್ದ. ಅವನ ಕತ್ತಿಗೆ ಕಣಗಿಲೆ ಹಾರಹಾಕಿ ಚಕ್ರವಾದ್ಯಗಳ ಹಾಕಿ ಕೂರಿಸಿ ಮೆರವಣಿಗೆ ಮಾಡುತ್ತಿದ್ದರು. ಮೆರವಣಿಗೆಯಲ್ಲಿ ಆರೇಳು ಜನ ಭಾಗವಹಿಸಿದ್ದರು. ಮಂಟಪದ ಮೇಲೆ ಕ್ಯಾನ್‌ಜಾಂಡಿಸ್ ಎಂದು ಹೆಸರಿತ್ತು.

'ಯಾರು' ? ಎಂದು ಎಂ. ಗ್ರಾಮಸ್ಥನೊಬ್ಬನನ್ನು ಪಿಸು ದನಿಯಲ್ಲಿ ಕೇಳಿದ

'ಓಚಯ್ನೋರು... ....'

'ಏನಾಗಿತ್ತೋ' ?

'ಏನೂ ಇಲ್ಲಾಂತೀನಿ...ಅದೇನೋ ಬೋರ್ಡ್ ಕೇಳಿದ್ರಂತೆ ಬಡವರಿಗೆ ಬೇಕೂಂತ ನಾನೂ ಬಡವ ಕೊಡೋದಿಲ್ಲ ಹೋಗ್ ಅಂತ ಗದರಿಸಿದ್ರಂತೆ ಇವ್ರು. ಆಮೇಲೆ ಮಾತಿಗೆ ಮಾತು ಹತ್ತಿ ಜಗಳಾ ಆಯ್ತಂತೆ. ಒರ್ರ್ಯ. ಓದೋ, ಬೋರ್ಡ್ ಇಲ್ದೇ ನಾಕ್ಲಾಸ್ ಹೇಗ್ ನಡೆಸ್ಲಿ, ಅಂತೆಂದ್ರಂತೆ. ಏನಾರ ಮಾಡ್ಕೊ, ಬೋರ್ಡ್ ಬೇಕೇಬೇಕೂ. ಮಿನಿಸ್ಟ್ರು ಕೇಳಿದ್ರೆ ಏನು ಹೇಳೋಣ, ಅಂತ ಅವಯ್ನನ್ನ ತಳ್ಳಿ ಕಿತ್ಕೊಂಡ್ ಹೋದ್ರಂತೆ....'

'ಯಾರು ?'

'ಅದೇ ನಮ್ಮ ಹಳ್ಳೀಕಡುಬಡವರು. ಅವ್ರೇ ಈ ವೋತ್ನು ಮಿನಿಸ್ಟ್ರು ಪ್ರೋಗ್ರಾಂ ಎಲ್ಲಾ ಅರೇಂಜ್ ಮಾಡ್ತಾ ಇದಾರೆ. ಓಚಯ್ನೋರು ಎದೆ ಬಡ್ಕೊಂಡು...'

ಎಂ ನನ್ನತ್ತ ನೋಡಿ ಮತ್ತೊಮ್ಮೆ ಅರ್ಥಗರ್ಭಿತ ಮೌನ ತಳೆದ

ಪಂಚಾಯ್ತಿ ಹಾಲಿನತ್ತ ಹೆಜ್ಜೆ ಹಾಕಿದೆವು, ಬಾಳೆಕಂಬಗಳು, ಮಾವಿನ ಎಲೆ, ತೋರಣ, ಅತ್ತಿಂದಿತ್ತ ಸಡಗರದಿಂದ ಓಡಾಡುವ ಕಾರ್ಯಕರ್ತರು, ಅಧಿಕಾರಿವರ್ಗ, ಬೀಡಿ ಸೇದುತ್ತಿದ್ದ ಜೀಪ್ ಡ್ರೈವರುಗಳು. ಜೂಜಾಟ ಆಡುತ್ತಿದ್ದ ಮಕ್ಕಳು (ನಾಳೆಯಿಂದ ಬೇರೊಬ್ಬ ಮೇಷ್ಟರು ಬರುವವರೆಗೆ ಅವರಿಗೆ ರಜ), ಲೌಡ್ ಸ್ಪೀಕರಿನಲ್ಲಿ ಮೊಳಗುತ್ತಿದ್ದ ಮಂತ್ರೋತ್ತರಾಯನ ಕೋಣಾಟ-ಇವೆಲ್ಲಾ ಇನ್ನೂ ತೀವ್ರ ಪ್ರಚಾರಾಂದೋಲನ ಹಾಗೂ ಸ್ಥಳದಲ್ಲೇ ಕಡುಬಡವರನ್ನು ಗುರುತಿಸುವ ಮುಖ್ಯ ಕಾರ್ಯಕ್ರಮ ಪ್ರಾರಂಭವಾಗಿಲ್ಲವೆಂದು ಸೂಚನೆ ಕೊಡುತ್ತಿದ್ದವು.

ಸಭಾರಂಭ

ಒಂದು ಗಂಟೆ ತಡವಾಗಿ ಮಾನ್ಯ ಸಚಿವೆ ಆಗಮಿಸಿದಾಗ ಮಕ್ಕಳೆಲ್ಲಾ ಮನೆಗೆ ಹೋಗಿ ನಿದ್ದೆಮಾಡಿದ್ದವು. ಉಂಡಿದ್ದವೋ ಇಲ್ಲವೋ ಹೇಳಲು ಸಾಧ್ಯವಿಲ್ಲ, ಸೆರಗನ್ನು ಸರಿಮಾಡಿಕೊಳ್ಳುತ್ತ ಸಚಿವೆ ಧಡ ಧಡನೆ ವೇದಿಕೆ ಏರಿದರು. ಪಕ್ಕದಲ್ಲೇ ಟೇಬಲ್ಲಿನ ಮೇಲೆ ಗೋಡೆಗೊರಗಿಸಿದ್ದ ತೊನ್ನು ಹಿಡಿದ ಬೋರ್ಡ್ ಸಿದ್ಧವಾಗಿತ್ತು. ನಾಲ್ಕೂ ಮೂಲೆಗಳಲ್ಲಿ ಮಾವಿನಎಲೆಗಳು ಕಂಗೊಳಿಸುತ್ತಿದ್ದವು. ಸೇವಂತಿಗೆಯ ಹಾರ ಅರ್ಧ

ಚಂದ್ರಾಕಾರವಾಗಿ ಇಡೀ ಬೋರ್ಡಿಗೆ ಶೋಭೆ ತಂದಿತ್ತು. ಸಚಿವೆ ತೃಪ್ತಿಯ ಮಂದ ಹಾಸದಿಂದ ಪವಡಿಸಿದರು. ಮಂತ್ರಿತ್ರಿರಾಯನ ಆರಾಧನೆ ಗಕ್ಕೆಂದು ನಿಂತು, ಸ್ವಾಗತ ಭಾಷಣ, ವಿಶೇಷ ಪ್ರಚಾರಾಂದೋಲನದ ತತ್ವ, ಉದ್ದೇಶ, ಮಹತ್ವಗಳನ್ನು ಅಪ್ಲಾರಿಗೆ ತಿಳಿಸಿಕೊಡುವ ಭಾಷಣಗಳೆಲ್ಲಾ ಯಥಾಸಾವಕಾಶ ಜರುಗಿ, ಸಚಿವೆ ಎದ್ದು ನಿಂತು, ಗಂಟಲು ಗೋರಿಕೊಂಡು ಸನ್ನದ್ಧರಾದಾಗ ಇದ್ದಕ್ಕಿದ್ದಂತೆ ಲೈಟ್ ಹೋಗಿ ಹಾಹಾಕಾರ ವೆದ್ದಿತು. 'ಲೈಟ್, ಲೈಟ್, ಪೆಟ್ರೋಮ್ಯಾಕ್ಸ್ !' ಎಂದು ಯಾರೋ ಚೀರಿದರು. 'ದಿನಾ ಹಿಂಗೇ ಎಂಟುಗಂಟೆಗೆ ಹೋಗ್ಬಿಡ್ತದೆ; ಎಂದು ಗ್ರೂಪ್ ಪಂಚಾಯ್ತಿ ಅಧ್ಯಕ್ಷರು ಸಚಿವೆಗೆ ಫಿರ್ಯಾದು ಕೊಟ್ಟರು, ಯಾರೋ ತಲೆ ಓಡಿಸಿ ಪಕ್ಕದಲ್ಲೇ ನಿಂತಿದ್ದ ಜೀಪು ಕಾರುಗಳ ಹೆಡ್‌ಲೈಟನ್ನು ವೇದಿಕೆಯತ್ತ ಬಿಡಿಸಿದರು.

'ಮೈಕ್ ಇಲ್ಲದೆ ನಾಕು ಮಾತಾಡ್ತೀನಿ, ಎಲ್ರೂ ಶಾಂತರಾಗಿ ಕುತ್ಕೋಬೇಕು,; ಸಚಿವೆ ಅಪ್ಪಣೆ ಕೊಟ್ಟರು. 'ಇಂದು ನಾವು ಒಂದು ಬಲಿಷ್ಠ ದೇಶವಾಗಿ ಮುಂದು ವರೀತಿದ್ರೂ ನಮ್ಮ ದೇಶದಲ್ಲಿ ಬಡತನ ನಾಶ ಆಗಿಲ್ಲ. ಅದಕ್ಕೇನೆ ನಮ್ಮ ನೆಚ್ಚಿನ ಪ್ರಧಾನಿಯವರು ಪದೇ ಪದೇ ಗರೀಬಿ ಹಟಾವೊ, ಗರೀಬೀ ಹಟಾವೋ, ಅಂತ ಹೇಳ್ತಾನೇ ಬಂದಿದಾರೆ. ಇದನ್ನ ತಪ್ಪು ತಿಳಕೊಂಡ ಕೆಲವರು ಅವರ ಕೈ ಬಿಟ್ಟು ಹೋದ್ರು. ಆದ್ರೇನಂತೆ ? ಆಮೇಲೆ ಪ್ರಧಾನಿಗಳ ಕೈಬಲವಾಯ್ತು. ಹೋದೋರು ಕೆಟ್ರು,, ಅಷ್ಟೆ, ನಾ ಇದನ್ನ ಯಾಕ್ ಹೇಳಿದೀನಿಂದ್ರೆ ಈ ಗರೀಬಿ ಇರೋವರ್ಗೂ ನಮ್ಮ ಏಳ್ಗೆ ಸಾಧ್ಯವಿಲ್ಲ. ಯಾಕೆಂದ್ರೆ ಬಡ್ತನ ಒಂದು ಶಾಪ. ಬಡ್ತನ ಇರೊವರಲ್ಲಾ ಉತ್ಪಾದನೆ ಹೆಚ್ಚೋದಿಲ್ಲ. ಎಲ್ರೂ ಕೆಲ್ಸಮಾಡಿ ಉತ್ಪಾದನೆ ಹೆಚ್ಚಿಸಬೇಕು, ಎಲ್ರೂ ಕೆಲ್ಸ ಮಾಡ್ಬೇ ಕಾದ್ರೆ ಬಡ್ತನ ನಾಶ ಆಗ್ಬೇಕು.'

ಲೈಟ್ ಬಂತು, ಜನರೆಲ್ಲಾ ಮತ್ತೊಮ್ಮೆ ಒಕ್ಕೊರಲಿನಿಂದ ಹಾಹಾಕಾರವೆತ್ತಿದರು. 'ಈಗ ನಮ್ಮ ದೇಶದಲ್ಲಿ ಯಾರು ಬಡವರು ಅನ್ನೋದನ್ನ ಮೊದಲು ಗುರ್ತಿಸಬೇಕಾಗಿದೆ, ಆಮೇಲೆ ಪ್ರಚಾರಮಾಡ್ಬೇಕು. ತೀವ್ರ ಪ್ರಚಾರ, ತೀವ್ರ ಆಂದೋಲನ ನಮ್ಮ ದೇಶದ ಕಥೇನೇ ಹಾಗಿದೆ, ಮೊದ್ಲು ಬ್ರಿಟಿಷರು ಇದ್ರು. ಅವರು ನಮ್ಮ ದೇಶದ ಅಭಿವೃದ್ಧಿಗೆ ಮಾರಕ ಅಂತ ಅವರನ್ನ ಗುರ್ತಿಸಿ ರಾಷ್ಟ್ರಪಿತ ಗಾಂಧೀಜಿಯ ಅಪ್ಪಣೆಯಂತೆ ಸ್ವಾತಂತ್ರ್ಯಾಂ ದೋಲನ ನಡೆಸಿದ್ವು. ಈಗ಼್ೂ ಅಷ್ಟೆ, ಬಡತನದ ರೇಖೆ ಹುಡ್ಕಿ ತೆಗ್ದಿಟ್ಟಿದೀವಿ. ನಾವೆಲ್ಲಾ ಅಗ್ಲೇ ಮಾತಾಡ್ಕೊಂಡ್ ಬಿಟ್ಟಿದ್ದೀವಿ, ನಾವು ಮಂತ್ರಿಗಳು, ಶತಾಯಗತಾಯ ಪ್ರಚಾರ ನಡ್ಸ್ಲೇಬೇಕು, ಈ ರೇಖೆ ಕೆಳ್ಗಿರೋ ಜನಗಳನ್ನೆಲ್ಲಾ ರೇಖೆ ಮೇಲೆ ಬರೋ ಹಾಗ್ಮಾಡಬೇಕು. ಮಾಡೇ ಮಾಡ್ತೀವಿ ನಮ್ಮ ದೇಶದಲ್ಲೇ ನಮ್ದು ಒಂದು ಪ್ರಥಮ ವಾಗ್ಬೇಕು. ಬೇರೆ ರಾಜ್ಯಗಳಿಗೆ ನಾವು ಮಾದ್ರಿಯಾಗಬೇಕು. ಅದಕ್ಕೇ ಸರಕಾರ, ಬ್ಯಾಂಕುಗಳು ಬೇಕಾದ ಸಾಲ ಸೌಲಭ್ಯಗಳನ್ನು ಕೂಡ ಮಾಡಿದೆ. ನೀವದನ ಬುದ್ಧಿವಂತಿಕೆ

ಯಿಂದ ಉಪಯೋಗ ಮಾಡ್ಕಬೇಕು. ಅದೂ ಅಲ್ದೆ ನಮ್ಗೆ ನಿಮ್ಮ ಸಹಕಾರನೂ ಬೇಕು. ಅದಕ್ಕೇ ನಾವು ಪ್ರಚಾರಾಂದೋಲನಾ ತೀವ್ರವಾಗಿ. ವಿಶೇಷವಾಗಿ ಮಾಡ್ತಿರೋದು ಈ ದಿನ ಜಿ. ಎಂ. ಹಳ್ಳಿಯಲ್ಲಿ ಬಡ್ತನದ ರೇಖೆಯಿಂದ ಕೆಳ್ಗಿರೋರ ಹೆಸರನ್ನೆಲ್ಲಾ ಈ ಬೋರ್ಡ್ ಮೇಲೆ ಬರೀತೀನಿ, ನೀವೆಲ್ಲಾ ಆದಷ್ಟು ಬೇಗ ಈ ರೇಖೆಯಿಂದ ಮೇಲೆ ಬರೋದಕ್ಕೆ ಪ್ರಯತ್ನಿಸಿ ಜಯಶೀಲರಾಗಬೇಕು. ನಮ್ಮ ಪ್ರಚಾರವ್ಯವಸ್ಥೆ ಯಾವಾಗ್ಲೂ ನಿಮ್ಮ ಸೇವೆಗೆ ಸಿದ್ಧವಾಗೇ ಇದೆ.

(1) ಮೇಷ್ಟ್ರಿಲ್ಲ : ಎಲ್ಲಿ ಒಂದು ಚಾಕ್ ಪೀಸ್ ಕೊಡಿ.... 'ಸಚಿವೆ ಸುತ್ತಮುತ್ತ ನೋಡಿದರು. ಯಾರೋ' ಮೇಷ್ಟ್ರನ್ನ ಕೇಳಿ ಅಂದರು. 'ಮೇಷ್ಟ್ರಿಲ್ಲ ಹೋಗ್ಬಿಟ್ರು ಬೋರ್ಡ್ ಜಗಳದಲ್ಲಿ ಮೆರವಣಿಗೆ ಆಗ್ತಾ ಐತೆ. ನಂ ಪಂಚಾಯ್ತಿಗೆ ಒಂದು ಬೋರ್ಡ್ ತರಿಸ್ಬೇಕು.... ಈ ಸ್ಕೂಲ್ ಬೋರ್ಡಿನ ಹಂಗೇ ಬೇಡ ಅಂದರು ಮತ್ತೆ ಯಾರೊ.
'ಚಾಕ್ ಪೀಸ್, ಚಾಕ್ ಪೀಸ್ !' ಎಂದರು ಸಚಿವೆ

ಹರಕು ಚಣ್ಣದ ಪೋರನೊಬ್ಬ ಗುಂಪಿನಿಂದ ಓಡಿಬಂದು ಜೇಬಿನಿಂದ ಒಂದು ತುಂಡು ಸೀಮೆಸುಣ್ಣ ತೆಗೆದು, 'ತಗಳಿ ಚಾಪೀಸು.' ಎಂದ. ಸಚಿವೆಯೇ ಸ್ವಹಸ್ತದಿಂದ ಅವನ್ನು ಸ್ವೀಕರಿಸಿದಾಗ, ಮಹಾತ್ಕಾರ್ಯದಲ್ಲಿ ಭಾಗಿಯಾಗಿ (ಸಕ್ರಿಯವಾಗಿ) ಧನ್ಯವಾದ ಭಾವ ಪೋರನ ಮುಖದಲ್ಲಿ ಬೆಳಗಿತು. ಸಚಿವೆ ಚಾಕ್ ಪೀಸ್‌ನಿಂದ ಗೆರೆಯೆಳೆದು ಬೋರ್ಡನ್ನು ಮೇಲಿಂದ ಕೆಳಕ್ಕೆ ಮುಕ್ಕಾಲು, ಕೆಳಗಿಂದ ಮೇಲಕ್ಕೆ ಕಾಲು ಭಾಗಮಾಡಿ ಇಬ್ಭಾಗಿಸಿದರು. ಆ ಗೆರೆಯನ್ನು ತೋರಿಸುತ್ತಾ 'ಇದೇ ನೋಡಿ ನಾವು ಹುಡುಕಿದ ದಾರಿದ್ರ್ಯರೇಖೆ !' ಎಂದು ಪ್ರಚಾರ ಮಾಡಿದರು. ಅಧಿಕಾರಿವರ್ಗದ ಪ್ರತಿನಿಧಿಯೊಬ್ಬ ಬಡವರ-ಅತಿ ಮತ್ತು ಕಡು-ಹೆಸರನ್ನು ಹೇಳುತ್ತಾ ಹೋದಂತೆ ರೇಖೆಯ ಕೆಳಗೆ ಅವುಗಳನ್ನು ಅಮೃತಹಸ್ತದಿಂದ ಬರೆಯತೊಡಗಿದರು.

ನಮ್ಮನ್ನೇ ತಿದ್ದೋಕೆ ಬರ್ತಾರೆ

'ತಮ್ಮಯ್ಯಾ....ಗುರುವಪ್ಪ....ಅಣ್ಣಯ್ಯ... ಪಾಪಣ್ಣ..ಹೆಳವಜ್ಜಾ..ಪುಟ್ಟಮ್ಮಾ ಶೆಟ್ರು ಬಸಪ್ಪ .... ಇವರೆಲ್ಲಾ ತಮ್ಮ ಹೆಸರುಗಳ ಶಾಸನದಲ್ಲಿ ಕಂಡರಿಸುವ ಐತಿಹಾಸಿಕ ಸಂದರ್ಭಕ್ಕೆ ಸಾಕ್ಷಿಯಾಗಿ ತಲೆಕೆರೆದುಕೊಳ್ಳತೊಡಗಿದರು.
'ದಾನಮ್ಮಾ.......'
ನಡು ಹರೆಯದ ಹೆಂಗಸೊಬ್ಬಳು ಮುಂದೆ ನಿಂತಳು. ಸಚಿವೆ ಬರೆದರು. 'ಧಾ....'
'ಹೊಕ್ಕೆ ಸೀಳಬ್ಯಾಡಿ ....ನನ್ನೆಸ್ರು ದಾನಮ್ಮ, ಹೊಕ್ಕೆ ಸೀಳಬ್ಯಾಡಿ' ಎಂದಳು ಸ್ಕೂಲ್ ಹುಡುಗರಿಗೆ ಉಪ್ಪಿಟ್ಟು ಮಾಡಿಕೊಡುವ ದಾನಮ್ಮ.

'ಏನದು ?' ಎನ್ನುತ್ತಾ ಸಚಿವೆ '...ನಮ್ಮ' ಬರೆದು ಮುಗಿಸಿದರು. ಪಕ್ಕದಲ್ಲಿದ್ದ ಷರು' ನಮ್ಮನ್ನೇ ತಿದ್ದೋಕೆ ಬರ್‍ತಾರೆ, ಬಿಕಾರಿನನ್ಮಕ್ಳು. ಎಲ್ಲೊ ಸಾಕ್ಷರ ಕಲಿತ ಮಾತ್ರಕ್ಕೆ ಪಂಡಿತಳಾಗಿ ಬುಟ್ಳೊ ಈ ಧಾನಮ್ಮಾ? ನಾವು ಕಾಣದ ಧಾನವ್ನೋ ಇವ್ಳು, ಎಂದು ತಮ್ಮ ಸಾರ್ವಜನಿಕ ಅಭಿಪ್ರಾಯ ಮುಖಂಡತ್ವವನ್ನು ಎಲ್ಲರಿಗೂ ಮನದಟ್ಟು ಮಾಡಿಕೊಟ್ಟರು. ಸಚಿವೆಯತ್ತ ತಿರುಗಿ, 'ನೀವು ಬರ್‍ದಿರೋದೇ ಸರಿ, ಸುಮ್ಕಿರಿ....' ಎಂದು ಸಮಾಧಾನ ಹೇಳಿ ದಾನಮ್ಮನನ್ನು ಕುರಿತು, 'ಏಯ್ ? ಸುಮ್ಮೆ ಕುಂತ್ಕೊ, ನಮ್ಗೆಲ್ಲಾ ಗೊತ್ತೈತೆ...ಹೆಂಗೆ ಬರೀಬೇಕೋ ಬರೀತೀವಿ...ಮಿನಿಷ್ಟ್ರಿಗಿಂತಾ ಬುದ್ವಂತೆ ಆಗ್ಬುಟ್ಯಾ ನೀನು ? ಎಂದು ಗದರಿಸಿ ಅವಳ ಉಸಿರಡಗಿಸಿದರು. ದಾನಮ್ಮ ಮುಖ ಕೆಳಿದುಕೊಂಡು ಮೂಲೆ ಸೇರಿದಳು.

ದಾರಿದ್ರ್ಯ ರೇಖೆಯ ಕೆಳಗಿನ ಜಾಗವೆಲ್ಲಾ ಬಡವರ ನಾಮಧೇಯಗಳಿಂದ ಕಂಗೊಳಿ ಸುತ್ತಿತ್ತು. ಇನ್ನೂ ಹಲವಾರು ಹೆಸರುಗಳು ಪಟ್ಟಿಯಲ್ಲಿದ್ದವು. ಅವಕ್ಕೆಲ್ಲಾ ಜಾಗ ಸಾಲದಾದ್ದರಿಂದ ಸಚಿವೆ, 'ಉಳಿದ ಹೆಸರುಗಳನ್ನು ಮತ್ತೊಂದು ಬೋರ್ಡಿನ ಮೇಲೆ ಅನಂತರ ಬರೆಸಲಾಗುವುದು. ನಿಮ್ಮೂರಿಗೆ ಸಾಕಷ್ಟು ದೊಡ್ಡ ಬೋರ್ಡ್ ಬೇಕು. ಆಗ ಹೊಸದಾಗಿ ಅರ್ಹತೆಗಳಿಸಿದ ವ್ಯಕ್ತಿಗಳನ್ನು ನಾವು ಮರೆಯೋದಿಲ್ಲ ಅಂತ ಆಶ್ವಾಸನೆ ಕೊಟ್ಟು, ಈದಿನ ನನಗೆ ಇಂಥಾ ಒಂದು ಒಳ್ಳೇ ಅವಕಾಶವನ್ನು ಕಲ್ಪಿಸಿಕೊಟ್ಟ ಸಮಸ್ತ ಗ್ರಾಮಸ್ಥರಿಗೂ ...' ಇತ್ಯಾದಿ ಇತ್ಯಾದಿಗಳನ್ನು ಹೇಳುತ್ತಿದ್ದಂತೆ ಗಡಚಿಕ್ಕುವ ಚಪ್ಪಾಳೆಯ ಸುರಿಮಳೆಯಾಯಿತು.

ವೀಣಾ : ಸಕ್ಕರೆ ಡಬ್ಬಕ್ಕೆ ತುಂಬ ಇರುವೆ ಮುತ್ತಿದೆಯಲ್ಲಮ್ಮ ?

ವೇಣಿ : ಹೌದಾ ! ಹಾಗಾದ್ರೆ ಆ ಸಕ್ಕರೆ ಡಬ್ಬದ ಮೇಲೆ ಖಾರದಪುಡಿ ಅಂತ ಚೀಟಿ ಅಂಟಿಸು. ಇರುವೆ ಎಲ್ಲಾ ಓಡಿ ಹೋಗುತ್ತವೆ.

ದೇವರಿದ್ದಾನೆ

—ಲೀಲಾಮಿರ್ಲೆ

"ನಮ್ಮ ಮಹಿಳಾ ಸಂಘದ ಕಾರ್ಯಕ್ರಮಕ್ಕೆ ನೀವು ಮುಖ್ಯ ಅತಿಥಿಯಾಗಿ ಬರಬೇಕು ಒಂದು ಸಣ್ಣ ಭಾಷಣ ಮಾಡಬೇಕು" ಎಂದು ವಿನಯದಿಂದ ಕೇಳಿಕೊಂಡರು ಕಾರ್ಯದರ್ಶಿ ಮಾಲಿನಿರಾವ್.

"ಅಲ್ರೀ, ಎಲ್ಲಾ ಬಿಟ್ಟು ನನ್ನ ಯಾಕ್ ಕರೀತೀರಿ? ನಂಗೆ 'ಸ್ಟೇಜ್ ಫ್ರಯಿಟ್' ವಿಪರೀತ. ನಿಮಗೆ ಇನ್ಯಾವ ತರ ಸಹಾಯ ಬೇಕಾದರೂ ಕೇಳಿ, ಮಾಡ್ತೀನಿ, ಕುರ್ಚಿ ಜೋಡಿಸೋದು, ತೋರಣ ಕಟ್ಟೋದು ಇತ್ಯಾದಿ ಏನಿದ್ದರೂ ಹೇಳಿ, ಧಾರಾಳವಾಗಿ ಮಾಡ್ತೀನಿ. ಆದರೆ ಮಾತಾಡೋದು ಅಂದ್ರೆ ಅದು ತುಂಬಾ ಕಷ್ಟದ ಕೆಲಸ" ಎಂದೆ.

"ಇಲ್ಲಾ. ನೀವು ಒಪ್ಪಿಕೊಳ್ಳಲೇಬೇಕು. ಇವತ್ತು ಗುರುವಾರ. ಶನಿವಾರವೇ ಇರೋದು ಸಮಾರಂಭ. 'ವಿಜ್ಞಾನ ಮತ್ತು ಮಹಿಳೆಯರು' ಅನ್ನೋ ವಿಷಯವಾದಿ ಅಥವ ನಿಮಗೆ ಬೇಕಾದ ಯಾವ ವಿಷಯದ ಮೇಲಾದರೂ ಐದು ನಿಮಿಷ ಮಾತಾಡಿದರೆ ಸಾಕು" ಎಂದರು.

"ಶ್ರೀರಾಮ ರಕ್ಷೆ, ನಂಗೆ ಮೊದಲೇ ಮಾತಾಡಲು ಬರಲ್ಲ. ಜೊತೆಗೆ 'ವಿಜ್ಞಾನ ಮತ್ತು ಮಹಿಳೆಯರು'. ವಿಜ್ಞಾನದಲ್ಲಿ ಪೂರ ಅಜ್ಞಾನ ನನಗೆ; ನನ್ನ ಯಾಕ್ ಗೋಳ್ ಹೊಯ್ಕೋತೀರಾ" ಎಂದು ಹಲುಬಿದೆ.

"ಮಾತಾಡಕ್ಕೆ ವಿಷ್ಯ ಯಾಕ್ ಗೊತ್ತಿರಬೇಕ್ರಿ? ಏನೋ ಐದು ನಿಮಿಷ ಮಾತಾಡಿ ಮುಗಿಸಿದ್ರಾಯಿತು".

"ಅಲ್ಲಾಮ್ಮ, ನಿಮ್ಮನೇ ಹತ್ತಿರಾನೆ ಆ ಸೈನ್ಸ್ ಟೀಚರ್ ರುಕ್ಮಿಣಿ ಇದಾರಲ್ಲಾ ಅವರನ್ನೇಕೆ ಕರೀಬಾರ್ದು"?.

"ಅವರನ್ನೇ ಮೊದಲು ಕೇಳಿದ್ದು. ಅವರ ಮಗಂಗೆ ಏನೊ ಆಪರೇಷನ್ ಅಂತೆ. ಬರಕ್ಕಾಗಲ್ಲಾ ಅಂತಂದ್ರು".

ಬಂದ ವಿಪತ್ತನ್ನು ತಪ್ಪಿಸಿಕೊಳ್ಳಲು ಮೇದುಳು ಚುರುಕಾಗಿ ಓಡಿತು.

"ಹಾಗಾದ್ರೆ ಆ ಸೋಷಿಯಲ್ ವರ್ಕರ್ ಸುಮಿತ್ರಮ್ಮ ಇದಾರಲ್ಲಾ, ಇದಕ್ಕೆ ಸರೀ ಹೋಗತ್ತೆ. ಹೆಂಗಸರ ಹತ್ತಿರ ಸದಾ ಜಗಳ ಆಡಿದರೂ, ಅವರ ವಿಷ್ಯ ಮಾತಾಡಕ್ಕೆ ಆಕೆಗೆ ಚೆನ್ನಾಗಿ ಬರತ್ತೆ" ಎಂದೆ.

"ಅವರನ್ನೂ ಕೇಳದ್ವಿ. ಅವರು ಅವತ್ತು ಊರಲ್ಲಿರಲ್ಲ. ಯಾವುದೋ ಕಾನ್ಫರೆನ್ಸ್‌ಗೆ ಬೊಂಬಾಯಿಗೆ ಹೋಗ್ತಾರೆ".

ಇನ್ನೂ ಮೂರು ನಾಲ್ಕು ಹೆಸರುಗಳನ್ನು ಹೇಳಿದೆ. ಕಾರಣಾಂತರದಿಂದ ಯಾರೂ ಬರಲು ಒಪ್ಪಿರಲಿಲ್ಲ.

"ಅದಕ್ಕೇ ನಿಮ್ಮ ಹತ್ತಿರ ಬಂದೆ. ನೀವು ಒಪ್ಪಿಕೊಳ್ಳಲೇಬೇಕು", ತುಂಬಾ ಒತ್ತಾಯ ಮಾಡಿದರು ಮಾಲಿನಿ.

ತಪ್ಪಿಸಿಕೊಳ್ಳಲಾರದೆ ಒಪ್ಪಿಕೊಂಡೆ.

ಆಕಡೆ ಆಕೆ ಹೊರಟರು. ಈಕಡೆ ಆಕಾಶ ತಲೆಮೇಲೆ ಕಳಚಿ ಬಿತ್ತು. ನಾಲ್ಕು ಜನರೆದುರಿಗೆ ಮಾತನಾಡಲು ಬಲು ಭಯ ನನಗೆ, ಒಂದು ಥರ ಮಂಕು ಬಡಿದ ಹಾಗೆ ಆಯ್ತು.

ನನ್ನ ಅವಸ್ಥೆಯನ್ನು ನೋಡಿ ನಮ್ಮವರು "ನಿಂಗ್ ಇಷ್ಟ್ ಕಷ್ಟವಾದರೆ ಯಾಕ್ ಒಪ್ಪಿಕೊಂಡೆ. ಇಲ್ಲಾ ಅಂತ ಖಡಾಖಂಡಿತವಾಗಿ ಹೇಳಬೇಕಾಗಿತ್ತು" ಎಂದು ಹೇಳಿ ಮತ್ತಷ್ಟು ರೇಗಿಸಿದರು.

"ಇಲ್ಲಾ ಅಣ್ಣ, ಅಮ್ಮನ ಸ್ವಭಾವ ಗೊತ್ತಿಲ್ವೆ, ಯಾರಾರು ಬಲವಂತ ಮಾಡಿದರೆ ಇಲ್ಲಾ ಅನ್ನೋಕೆ ಆಗಲ್ಲಾ. ಅದನ್ನ ತಿಳಿಕೊಂಡೆ ಆಕೆ ಇಲ್ಲಿ ಬಂದದ್ದು" ಎಂದಳು ನನ್ನ ಮಗಳು.

ಆಗಿದ್ದಾಯಿತು. ತಕ್ಷಣ ಕೂತೆ ಭಾಷಣ ಬರೆಯಲು. ಅದೂ ಇದೂ ಪುಸ್ತಕ ನೋಡಿ ಎರಡು ಪೇಜ್ ಬರೆದದ್ದೂ ಆಯಿತು. ಇನ್ನು ಕಂಠಪಾಠ ಮಾಡಬೇಕು.

ಹಾಲಿಂದ ದಿಢೀರನೆ ಅಡಿಗೆ ಮನೆಗೆ ಓಡಿಬಂದರು. ಇವರು "ಏನ್ ಒಬ್ಬಳೇ ಮಾತಾಡ್ಕೋತಾ ಇದಿ. ತಿಥಿ, ತಿಥಿ ಅಂತಿದೀ" ಎಂದರು ಬೆದರಿದ ಧ್ವನಿಯಲ್ಲಿ, "ಮಾನ್ಯ ಮಹಿಳೆಯರೇ, ಇವು ನನ್ನನ್ನು ಮುಖ್ಯ ಅತಿಥಿಯನ್ನಾಗಿ ..." ಅಂತ ಅಭ್ಯಾಸ ಮಾಡ್ತಿದೀನಿ ಅಂದೆ.

ಶನಿವಾರದ ಸಂಜೆ ಕಳೆದರೆ ಗಂಡಾಂತರ ಕಳೆದ ಹಾಗೆ ಅನ್ನಿಸಿತು. ಅಂದು ಎಲ್ರೂ ನನ್ನಿಂದ ದೂರವಿದ್ದ ಹಾಗೆ ಖಂಡಿತ. "ಯಾಕ್ ಎಲ್ಲರೂ ಹೀಗೆ ಸುಮ್ಮನಿದ್ದೀರ' ಎಂದು ರೇಗಿದೆ. "ನೀವು ಮೊನ್ನೆಯಿಂದ ತುಂಬಾ ಟೆನ್ಸ್ ಆಗಿದ್ದಿರಾ ಅದಕ್ಕೆ ನಾವ್ಯಾರೂ ನಿಮ್ಮ ತಂಟೆಗೆ ಬರ್ತಿಲ್ಲ", ಎಂದಳು ನನ್ನ ಮಗಳು.

"ಆಗಿದ್ದಾಯ್ತು. ಒಂದು ಕಾಂಪೋಸ್ ಆದ್ರೂ ತಗೊ. ಅಲ್ಲಿ ಹೋಗೋಹೊತ್ಗೆ ಇನ್ನೇನಾದ್ರೂ ಎಡವಟ್ಟು ಆದೀತು" ಎಂದರು ನಮ್ಮವರು ಆತಂಕದಿಂದ.

ಶನಿವಾರ ಸಂಜೆಹೊತ್ತಿಗೆ ತಳಮಳ ಜಾಸ್ತಿಯಾಯಿತು. ದೊಡ್ಡ ಸಭೆಯಲ್ಲಿ ನಿಂತು ಎಲ್ಲರೆದುರಿಗೂ ಮಾತನಾಡಬೇಕು. ಗಟ್ಟಿ ಮಾಡಿದ್ದೆಲ್ಲಾ ಮರೆತರೆ ಏನು ಗತಿ ? ಬಾಯಲ್ಲಿ ಏನೂ ಹೊರಡದೇನೇ ಇದ್ದರೆ.....ನೂರೆಂಟು ಯೋಚನೆಗಳು ತಲೆ ತಿಂದವು.

ಗಲಾಟೆ ಇಲ್ಲದೆ ಒಂದು ಕಾಂಪೋಸ್ ನುಂಗಿ, ಆಂಜನೇಯ ಸ್ವಾಮಿಯ ಮೇಲೆ ಭಾರ ಹಾಕಿ, ಐದೂಕಾಲು ಗಂಟೆಗೆ ಮನೆ ಬಿಟ್ಟೆ.

ಮಹಿಳಾ ಸಂಘದ ಬಾಗಿಲಲ್ಲೇ ನಿಂತಿದ್ದರು ಅದರ ಅಧ್ಯಕ್ಷಿಣಿ. ಆದರದಿಂದ ಬರ ಮಾಡಿಕೊಂಡರು. ಐದೂವರೆಗೆ ಪ್ರೋಗ್ರಾಂ ಶುರು. ಹತ್ತು, ಹನ್ನೆರಡು ಜನ ಇದ್ದರೆ ಹೆಚ್ಚೆಚ್ಚು. ಇವರೆಲ್ಲಾ ಇಂದಿನ ಕಾರ್ಯಕ್ರಮದಲ್ಲಿ ಭಾಗವಹಿಸುವವರೇ ಎಂದರು ಮಾಲಿನಿ. 5-45ರ ಹೊತ್ತಿಗೆ ಮೂರು ನಾಲ್ಕು ಜನ ಹೆಂಗಸರು ಬಂದು ಕೂತರು.

ಮಾಲಿನಿ ಮುಖ ಮಂಕಾಗಿತ್ತು. ಅಧ್ಯಕ್ಷಿಣಿಯ ಹತ್ತಿರ "ಇದೇನು ನಮ್ಮ ಮೆಂಬರ್ಸ್ ಕೂಡ ಹೀಗ್ ಮಾಡ್ತಾರೆ, ಟೈಂಗೆ ಸರಿಯಾಗಿ ಬರೋದಿಲ್ವೆ. ಮುಖ್ಯ ಅತಿಥಿನ ಎಷ್ಟೊತ್ತೂಂತ ಕಾಯಿಸೋದು", ಅಂತ ಗೊಣಗಿದರು. ಏಳಾದರೂ ಜನರ ಸುಳಿವೇ ಇಲ್ಲ.

"ಅಯ್ಯೋ, ಈಗ್ ಹೊಳೀತು" ಅಂದ್ರು ಒಬ್ಬಾಕೆ, 'ಇವತ್ಯಾರೂ ಬರಲ್ಲಾರಿ ಇವತ್ತು ಟೀ.ವೀ ಲಿ ಕನ್ನಡ ಸಿನೆಮಾ ಇದೆ'ಅಂದ್ರು.

ಹೋದ ಪ್ರಾಣ ಬಂದ ಹಾಗಾಯಿತ! ದೇವರು ಆಪತ್ ಬಾಂಧವ, ಕರುಣಾಳು, ದಯಾಮಯ, ಭಕ್ತವತ್ಸಲ ಅಂತೆಲ್ಲಾ ಅನ್ನೋದು ಅಕ್ಷರಶಃ ನಿಜ ಎನ್ನೋದು ಆಗ ಗೊತ್ತಾಯ್ತು. ಟೀ.ವೀ. ಸಿನಿಮಾ ರೂಪದಲ್ಲಿ ಬಂದು ನನ್ನ ಕಷ್ಟವನ್ನು ಪರಿಹರಿಸು ತ್ತಾನೆಂದು ನಾನು ಯೋಚಿಸಿರಲಿಲ್ಲ !

ಮುಂದಾರ-6

—ರಮ್ಯ

'(ಕಾಲೇಜು ಸ್ಪರ್ಧೆ ಇನ್ನೊಂದು ಗಂಟೆಯಿರುವಂತೆ ಚಟುವಟಿಕೆ ಗಳು ಚುರುಕಾಗಿವೆ.)

ಪ್ರಿನ್ಸಿಪಾಲರ ಕೋಣೆಯಲ್ಲಿ ಒಂದುಕಡೆ ಒಂದು ಚಾಪೆ ಹಾಸಿತ್ತು. ಅದರ ಒಂದು ತುದಿಯಲ್ಲಿ ಒಂದು ಗಾಳಿದಿಂಬು ಇನ್ನೊಂದು ತುದಿಯಲ್ಲಿ ಒಂದು ತೆಳ್ಳನೆಯ ಬೆಡ್ ಷೀಟ್, ತಲೆ ದಿಂಬಿನಮೇಲೆ ಒಂದುಫೋಟೋ ಶಿವಲಿಂಗ, ನಂದಿ ಕಾಣುತ್ತಿದ್ದವು. ಉಳಿದಕಡೆ ಗಾಜಿನ ಮೇಲೆ ಬಿಳಿಯ ಪೊರೆ ಹತ್ತಿಕೊಂಡಿತ್ತು. ಮೊಳೆಗೆ ಒಂದು ಪ್ಲಾಸ್ಟಿಕ್ ಗುಲಾಬಿ ಹೊದ್ದಿಕೆ ಕಡೆಯ ಗೋಡೆಯ ಮೇಲೆ ಧೂಳು ಮುಚ್ಚಿದ ಇನ್ನೊಂದು ಫೋಟೋ. ಕಷ್ಟಪಟ್ಟು ನೋಡಿದರೆ ಅದು ಒಬ್ಬ ತರುಣಿಯ ಚಿತ್ರವೆಂದು ಕಾಣುತ್ತಿತ್ತು. ಕಿಟಕಿಯ ಕಡೆ ಒಂದು ಮೇಜು.ಸುತ್ತಲೂ ನಾಲ್ಕು ಕುರ್ಚಿಗಳು ಕಪಾಟಿನ ತುಂಬಾ ಕೆಮಿಸ್ಟ್ರಿ ಪುಸ್ತಕ, ನಿಯತಕಾಲಿಕಗಳ ಸಂಪುಟಗಳು. ಮೇಜಿನ ಮೇಲೆ ಅನೇಕ ಫೈಲುಗಳು ಕಾಗದಗಳು

ವೆಂಕಟಪ್ಪನವರು ಗೋಡೆಯ ಮೊಳೆಗೆ ಹಾಕಿದ್ದ ಫ್ಲಾಸ್ಕ್ ತೆಗೆದು ಪಿಂಗಾಣಿಕಪ್ಪು ಗಳಲ್ಲಿ ಕಾಫಿ ಸುರಿದು, ಪ್ರೊ ಶೇಖರ್ ಮತ್ತು ವಾಸು ಇಬ್ಬರಿಗೂ ಕೊಟ್ಟರು. ತಾವೊಂದು ಸಿಗರೇಟ್ ಹೊತ್ತಿಸಿ 'ವಾಸು, ಕತೆ ಎಲ್ಲಿಗೆ ಬಂತು ?' ಎಂದರು .

ವಾಸು 'ಸರ್, ಬೈಥಾನ್ಸ್ ಈ ಡಿಸ್ಕವರಿ ಆದದ್ದು ಪ್ರೊಫೆಸರಿಗೆ ಹೇಳಿದೆ. ಅವರು ಏನನ್ನೂ ಹೇಳಲಿಲ್ಲ. ನಿಮ್ಮ ಸಲಹೆಯಂತೆ ಪ್ರಯೋಗ ಮುಂದುವರೆಸಿದೆ. ಆಮೇಲೆ ಪ್ರೊ. ಕಿಲಿನ್ ಅವರು ನನ್ನ ಪ್ರಯೋಗಗಳ ಬಗ್ಗೆ ಒಂದು ಟಿಪ್ಪಣಿಯನ್ನು ತಮ್ಮ ಯೂನಿ ವರ್ಸಿಟಿ ಜರ್ನಲ್‌ನಲ್ಲಿ ಪ್ರಕಟಿಸಿದರು. ಆಗ ನಮ್ಮ ಪ್ರೊಫೆಸರ್ ನನ್ನನ್ನೇಕೆ ಅಕ್ನಾಲೆಜ್ ಮಾಡಲಿಲ್ಲ ಎಂದು ಕೇಳಿದರು" ಎಂದ, ವೆಂಕಟಪ್ಪನವರು ಬಾಯಿಹಾಕಿ 'ಆ ಕುಂಟನ ಹೆಸರೇಕೆ ಹಾಕಿದೆ ಎಂದನೋ ಇಲ್ಲವೋ?'

ವಾಸು ಹೇಳಿದ "ಸರ್ ಪೊಲಾಳ್ವ ಯೂನಿವರ್ಸಿಟಿ ಹೆಸರು ಹಾಕಿದ್ದೇನಲ್ಲ ಕ್ರೆಡಿಟ್ ನಿಮಗೂ ಬಂದ ಹಾಗಲ್ಲವೇ ಎಂದು ಕೇಳಿದೆ. ಆ ಹೊತ್ತಿನಿಂದ ಒಂದು ತರಹಾ ಕಿರಿಕಿರಿ ವೈಮನಸ್ಸು. ಈ ವರ್ಷ ಕೇವಲ ಐವತ್ತು ಪರ್ಸೆಂಟ್. ಮುಂದಿನ ವರ್ಷ ಪಾಸಾಗುವುದೂ ಅನುಮಾನ."

ಪ್ರೊ। ಶೇಖರ್ ಎಚ್ಚೆತ್ತು ಕೇಳಿದರು.
ಈ ಯೂನಿವರ್ಸಿಟಿಗೆ ಪೋಲ್ವಾಳ ಯೂನಿವರ್ಸಿಟಿ ಅಂತ ಯಾಕೆ ಹೆಸರಿಟ್ಟರು?"
ವೆಂಕಟಪ್ಪನವರು ಮಾತಾಡುವಷ್ಟರಲ್ಲಿ ವಾಸು ಹೇಳಿದ "ಇಲ್ಲಿ ಆಡಳಿತವೆಲ್ಲ ಪೋಲು ಮಾಡುವವರದೇ ಅಂತ ತೋರಿಸುವುದಕ್ಕಿರಬೇಕು." ವೆಂಕಟಪ್ಪನವರು ಹೇಳಿದರು.

Exactly rightಹಿಂದೆ ಇಲ್ಲಿ ಪೋಲಾಳ್ವ ದಂಡನಾಯಕ ಅನ್ನೋನು ಆಳುತ್ತಿದ್ದ ನಂತೆ. ಅವನ ಅಮ್ಮ ಅವನು ಚಿಕ್ಕವನಿದ್ದಾಗ ತೊಟ್ಟಿಲಿನಲ್ಲಿ ತೂಗುತ್ತಾ ಕೆರೆಯಂ ಕಟ್ಟಿಸು, ಬಾವಿಯಂಸವೆಸು, ದೇವಾಗಾರವಂ ಮಾಡಿಸು, ಸೆರೆಯೊಳ್ ಸಿಲ್ಕಿದಅನಾಥರಂ ಬಿಡಿಸು ಅಂತಾ ಹೇಳುತ್ತಿದ್ದಳಂತೆ. ದೊಡ್ಡವನಾದ ಮೇಲೆ ಇವನು ಅದೇ ಮಾಡ ರಂಭಿಸಿದನಂತೆ ಹಣವನ್ನೆಲ್ಲಾ ಇವನು ದಂಡಮಾಡುತ್ತಿರುವುದರಿಂದ ಇವನಿಗೆ ದಂಡ ನಾಯಕನ ಕೆಲಸವೇ ಸರಿ ಅಂತಲೂ, ಆಗಿಂದಾಗ ಇಂಥಾ ಕೆಲಸಗಳಲ್ಲಿ ಹಣ ಪೋಲು ಮಾಡುತ್ತಾ ಇರುವುದರಿಂದ ಇವನು ಪೋಲ್ವಾಳನೇ ಸರಿ ಅಂತಲೂ ಅವನ ರಾಜನೋ, ಚಕ್ರವರ್ತಿಯೋ ತೀರ್ಮಾನಿಸಿದರಂತೆ."
ವಾಸು ನಕ್ಕು "Very truely said" ಎಂದ.
ಶೇಖರ್ ಕೇಳಿದರು "ಹಾಗಾದರೆ ವಾಸು ಗತಿಯೇನು?"

ಪ್ರಿನ್ಸಿಪಾಲರು ಹೇಳಿದರು. "ಅದಕ್ಕೆ ವ್ಯವಸ್ಥೆ ಮಾಡೋಣ, ಕಿಲಿನ್‌ಗೆ ನಾನು ಬರೆ ಯುತ್ತೇನೆ. ಅಲ್ಲದೆ ಆನ್ಗ್ಲೊರಾಸ್ ಕಂಪನಿಯ ಚೀಫ್‌ಗೆ ಬರೆದಿದ್ದೇನೆ. ಇನ್ನೊಂದುಗಂಟೆ ಒಳಗೆ ಅವ ಬರಬಹುದು. ಇದು ಅಗ್ನಿ ಭಯಂಕರ ಅನ್ನಬಹುದಾದ ಸಂಶೋದನೆ. I will fight with all my might

* * *

ಹ್ಯಾಂಲೆಟ್ ಚೀಟಿಗಳನ್ನು ಹರಿದೆಸೆದು ಮುಂದೆ ಹೋದ ಸ್ವಲ್ಪ ಹೊತ್ತಿನಲ್ಲೇ, ಓ. ಶಿವು ಎಂದರೆ ಒಥೆಲೋ, ಆಕಸ್ಮಿಕವಾಗಿ ಆ ದಾರಿಯಲ್ಲಿ ಬಂದ. ಅವನು ತಲೆಯೆತ್ತಿ ಆಕಾಶ, ಸೂರ್ಯ, ಗಾಳಿಗಳನ್ನು ಅನುಮಾನದಿಂದ ಒಮ್ಮೆ ಪರೀಕ್ಷಿಸಿ, ಬಳಿಕ ರಸ್ತೆಯ ಪಕ್ಕದ ಚಿಟ್ಟಾಲದ ಮರವನ್ನೂ, ಅದರಿಂದ ಸ್ವಲ್ಪ ದೂರದಲ್ಲಿದ್ದ ಮೈದಾನದ ಗರಿಕೆ ಹುಲ್ಲನ್ನೂ ಸಾಶಂಕ ದೃಷ್ಟಿಯಿಂದ ಅವಲೋಕಿಸಿದ. ಹಾಗೆ ನೋಡುತ್ತಾ ತನ್ನ ಎಡ ಹೆಜ್ಜೆ ತುಳಿದಿದ್ದ ಕಾಗದದ ತುಂಡನ್ನು ಕೈಗೆತ್ತಿಕೊಂಡು. ಅದರಲ್ಲಿದ್ದ ಅಕ್ಷರಗಳು ವಸಂತ ಬರೆದಿದ್ದು ಎಂದು ತಕ್ಷಣ ತಿಳಿಯಿತು. ತನಗೆ ತಿಳಿಸದೆ ವಸಂತ ಯಾರಿಗೋ ಚೀಟಿ ಬರೆದಳಲ್ಲಾ ಸದ್ಯ ಇವಳ ಮೋಹದಿಂದ ಬಿಡುಗಡೆಯಾದೆನಲ್ಲಾ ಎಂಬ ಆಲೋ ಚನೆ ಅವನಿಗೆ ಖುಷಿಕೊಟ್ಟಿತು. ಆ ಕಂಠದಲ್ಲಿ ಬ್ರಹ್ಮ ಎಂಥಾ ಮಧುರ ಸ್ವರವನ್ನಿಟ್ಟಿದ್ದ! ಆದರೆ ಅವಳ ಮನಸ್ಸು ಎಂತಹ ವಿದ್ರೋಹದಿಂದ ತುಂಬಿದೆ. ಯಾರಿಗೆ ಬರೆದ ಚೀಟಿ? ಇನ್ನಾರಿಗೆ ಹ್ಯಾಂಲೆಟ್‌ಗೇ ಇರಬೇಕು, ಸಿಕ್ಕಲಿ ಅವನು ಕೈತೋರಿಸಿ ಬಳಿಕ ಸ್ನಿಗ್ಧ ಮುಗ್ಧ

ಳಾದ ಮಂದಾರನಿಗೆ ತನ್ನ ಮನಸ್ಸನ್ನು ಪೂರ್ಣವಾಗಿ ಕೊಟ್ಟು ಅವಳ ಕೋಮಲ ಪಾದಗಳನ್ನು ಕೈಯ್ಯಲ್ಲಿ ಹಿಡಿದು 'ಅಹೋ ಮುಗ್ಧೆ ಸ್ನಿಗ್ಧೇ ಚಪಲನಯನೇ ಚಂದ್ರವದನೇ ಪ್ರಸೀದ ಎಂದು ಬೇಡಿ ತನ್ನ ಜೀವನವನ್ನು ಸಾರ್ಥಕಮಾಡಿಕೊಳ್ಳುತ್ತೇನೆ ಎಂದು ನಿರ್ಧರಿಸಿದ. ತನ್ನ ಮನೆಗೆ ಹಿಂದಿರುಗಿ ಜೋಡಿ ಬಾರು ಬಂದೂಕವನ್ನು ತನ್ನ ಕಾರಿನಲ್ಲಿ ಇಟ್ಟುಕೊಂಡು ಕಾಲೇಜಿನ ಬಳಿಗೆ ಹೋದ.

ಕಾಲೇಜು ಕ್ಯಾಂಪಸ್ ವಿಜನವಾಗಿತ್ತು. ಅದರ ನಡುವಿನ ಸಭಾಂಗಣ ಬಿಕೋ ಎನ್ನುತ್ತಿತ್ತು. ವಾಯುವ್ಯದಲ್ಲಿದ್ದ ಫಿಸಿಕ್ಸ್ ಲ್ಯಾಬ್ ನೈರುತ್ಯದ ಕೆಮಿಸ್ಟ್ರಿ ಲ್ಯಾಬ್‌ಗಳಲ್ಲಿ ಒಬ್ಬಿಬ್ಬ ಹುಡುಗಹುಡುಗಿಯರ ಸುಳಿವು ಕಾಣಿಸಿತು. ಅಲ್ಲೇ ಅವನೆದುರಿಗೆ ಪ್ರಭಾ ಮೂಡಿದಳು.

'ಓ ಶಿವೂ' ಎಂದು ಕೂಗಿದಳು.

'ಬಲೋ, ನಾನೇ, ಏನು ಬೇಕಾಗಿತ್ತು ?' ಎಂದ ಶಿವು.

'ಎಚ್ ಶಿವೂ ಕಂಡನೇ?'

'ನಾನು ಅವನನ್ನೇ ಹುಡುಕುತ್ತಿದ್ದೆ'

'ಅದೇಕೆ ?' ಪ್ರಭಾ ಕೇಳಿದಳು.

'ನನ್ನ ಕಾರಿನಲ್ಲಿ ಜೋಡಿಬಾರು ಬಂದೂಕು ಇದೆ. ಎರಡು ಗುಂಡುಗಳಿವೆ ಒಂದು ವಸಂತೆಗೆ ಮತ್ತೊಂದು ಹೆಚ್ ಶಿವೂಗೆ.'

'ಇದೇನು ಓ, ಬುದ್ಧನನ್ನು ಮರೆತೆಯಾ, ಗಾಂಧೀಜಿಯನ್ನು ಮರೆತೆಯಾ?'

ಅದೆಲ್ಲಾ ಓಲ್ಡ್ ಫ್ಯಾಷನ್ಡ್ ಇದು ರಿಸಲ್ಟ್ ಸೆಂಟರ್ಡ್ ಏಜ್. ಷಾನನ್ನು ಓದಿದ್ದೀಯಾ?. ಇಲ್ಲ.'

'ನಾನೂ ಓದಿಲ್ಲ. ಆದರೆ ನಮ್ಮ ಇಂಗ್ಲಿಷ್ ಲೆಕ್ಚರರ್ ಓದಿದ್ದಾರೆ. ಷಾ ಏನು ಹೇಳುತ್ತಾನೆ ಗೊತ್ತೇ ? ನೆಪೋಲಿಯನ್ ಇದ್ದನಲ್ಲಾ ಅವನು ಒಂದು ಮಹಾಸಂಶೋಧನೆ ಮಾಡಿದ್ದನಂತೆ ಬದುಕಿನ ಗುಂಡು ಹಾರಿಸಿದರೆ, ಎದುರಿಗಿದ್ದವನು ಹರೋಹರ ಅದಕ್ಕೇ ಅವನು ....'

'ರಪ್ಪಾ, ವಾಟರ್ಲೂಗಳಲ್ಲಿ ಸೋತದ್ದು.'

ಒಥೆಲೋ ತನ್ನ ಕಾರನ್ನೇರಿ ಹೊರಟು ಹೋದ.

ಪ್ರಭಾ ಗಡಿಯಾರ ನೋಡಿಕೊಂಡಳು. ಇನ್ನೊಂದು ಗಂಟೆ ಮಾತ್ರ ಉಳಿದಿತ್ತು.

* * * * *

ರಾಜೀವ ಚಿಂತಾಕ್ರಾಂತನಾಗಿ ಒಬ್ಬನೇ ಕಾಲೇಜ್ ಕ್ಯಾಂಟೀನಿನಲ್ಲಿ ಕುಳಿತಿದ್ದ. ಬಿಸಿತುಪ್ಪವನ್ನು ಬಾಯಲ್ಲಿಟ್ಟುಕೊಂಡವನಂತೆ ಹಿಂಸೆಪಡುತ್ತಾ ಕುಳಿತಿದ್ದ. ಹ್ಯಾಂಲೆಟ್ ಅವನಿಗೆ ಪ್ರಿನ್ಸಿಪಾಲರ ಸಂದೇಶವನ್ನು ತಲುಪಿಸಿ ಹೊರಟು ಹೋಗಿದ್ದ. ಅವನು

ಯಾವ ಸನ್ನಿವೇಶವನ್ನು ತಪ್ಪಿಸಿಕೊಳ್ಳಲು ಪ್ರಾರ್ಥಿಸುತ್ತಿದ್ದನೋ ಅದು ಅವನ ಮೇಲೇರಿ ಬಂದಿತ್ತು. ಅವನು ಒಂದು ಕಪ್ ಕಾಫಿ ಕುಡಿದು ಮೇಲೊಂದು ಲೋಟ ತಣ್ಣೀರು ಕುಡಿದ. ಹನ್ನೆರಡು ಗಂಟೆಗೆ ಸರಿಯಾಗಿ ಹತ್ತು ಪ್ಲೇಟ್ ಚಿಪ್ಸ್. ಹತ್ತು ಕಪ್ ಕಾಫಿ ಕಳಿಸಲು ಕ್ಯಾಂಟೀನಿನ ಅಧಿಪತಿಗೆ ಆರ್ಡರ್ ಕೊಟ್ಟು, ಹೊರಬಿದ್ದ. ಪ್ರಭಾ ಅವನಿಗೆ ಎದುರಾದಳು.

ತಕ್ಷಣವೇ ಅವನಿಗೆ ನೂರಾರು ಧರ್ಮಸಂಕಟಗಳು ಎದುರು ಬಂದಂತಾಗಿ ತಲೆ ಸುತ್ತು ಬಂತು.

'ಹಲೋ ರಾಜೀವ್' ಎಂದಳು ಪ್ರಭಾ ಬೆನ್ನ ಮೇಲಿದ್ದ ಜಡೆಯನ್ನು ಎಡ ಬುಜದ ಮೇಲೆ ಹಾದು ಎದೆಯ ಮೇಲೆ ಎಳೆದುಕೊಂಡು, ಅದರ ತುದಿಯನ್ನು ಕುಂಚದಂತೆ ಝುಳುಪಿಸಿದಳು. ಮೆಲುನಗುವನ್ನು ಲೇಪಿಸಿದ ಮಾತನ್ನಾರಂಭಿಸಿದಳು.

"ಮಂದಾರ ನಿನ್ನನ್ನು ನೋಡಲು ಕಾತರಳಾಗಿದ್ದಾಳೆ"

"ಏಕೆ ?"

"ಸ್ಟುಪಿಡ್ ಕ್ವೆಶ್ಚನ್. ನೀನು ಈ ಕೂಡಲೇ ಅವಳನ್ನು ನೋಡಲೇಬೇಕು. ಜೀವನ್ಮರಣದ ಪ್ರಶ್ನೆ. ಸೋ, ಬಿ ಎ ಗುಡ್ ಬಾಯ್, ಮನಸ್ಸು ಬಿಚ್ಚಿ ಮಾತಾಡಿ ನಂತರ........"

ರಾಜೀವ ಒಂದು ದೇಶಾವರಿ ನಗೆ ಬೀರಿ
"ಏನೂ ಅಗತ್ಯವಿಲ್ಲ. ನಿನ್ನೆ ಸಂಜೆ ಇನ್ನೂ ನೋಡಿದ್ದೆ. ಇವೊತ್ತು ಬೆಳಿಗ್ಗೆ ನೋಡಿದ್ದೆ, ಐ ಆ್ಯಮ್ ಬೋರ್ಡ್"
"ರಾಜೀವ್, ನಿನಗೆ ಅವಳ ಮೇಲೆ ಏನು ಗ್ರಡ್ಜ್ ?"
"ಪ್ರಭಾ ನನ್ನನ್ನೇಕೆ ಹಿಂಸಿಸುತ್ತೀ ?"
"ರಾಜೀವ, ನಿಜಕ್ಕೂ ಇದು ಅವಳ ಜೀವನದ ಶಿರುವು. ಅವಳಿಗೊಂದು ಬ್ರೇಕ್ ಬೇಕಾಗಿದೆ."

"ಅದೇ ನಿಜ ನೋಡು. ಆ ಕಿಂಗ್‌ಲಿಯರ್ ಇವಳನ್ನು ಮುದ್ದಿನಿಂದ ಬೆಳೆಸಿ ಕೆಡಿಸಿದ. ನೀನು ಅವಳಿಗೆ ಸತ್ಯ ಹೇಳಲು ಹಿಂಜರಿಯುತ್ತೀ. After all ಏನಿದು ? ಬಣವೇಕಲ್ ಕಾಲೇಜು ಯುಗಳಗೀತೆ ಸ್ಪರ್ಧೆ. ಕಲ್ಯಾಣ್‌ಜಿ ಆನಂದ್‌ಜಿ, ಲಕ್ಷ್ಮೀಕಾಂತ್ ಪ್ಯಾರೇಲಾಲ್ ಯಾರೂ ಇದರ ಹೆಸರನ್ನೇ ಕೇಳಿಲ್ಲ, ಅಲ್ಲದೆ ವಸಂತ definitely thousand times better singer ಮಂದಾರ ನನ್ನ ಕ್ಲೋಸ್‌ಫ್ರೆಂಡ್ ನಾವಿಬ್ಬರೂ ಒಂದನೇ ಕ್ಲಾಸಿನಿಂದ ಜೊತೆಗೆ ಓದುತ್ತಾ ಬಂದಿದ್ದೇವೆ. ಉಪ್ಪಿಟ್ಟು ಚೆನ್ನಾಗಿ ಮಾಡ್ತಾಳೆ. ತೆಪರು ತೆಪರು ಫ್ಯಾಷನ್ ಮಾಡ್ತಾಳೆ, ಸಂಗೀತ ಬರುತ್ತೆ ಅಂತ ಭ್ರಮಿಸಿದ್ದಾಳೆ. ನಥಿಂಗ್ ಎಗೆನೆಸ್ಟ್ ಹರ್. ಬೇಕಿದ್ರೆ ಅವಳಿಗಾಗಿ ಪ್ರಾಣ ಕೊಡಬಲ್ಲೆ. ಬ್ರದರ್ಲಿ ಅಫೆಕ್ಷನ್. ವಸಂತ ವೆರಿ ಹಾಟ್. ಆದರೆ ದಿ ಬೆಸ್ಟ್ ಅಮಾಂಗ್ ದಿ ಲಾಟ್."
ಪ್ರಭಾನ ಮುಖ ಇಳಿಬಿತ್ತು. ಅವಳು ಒಂದು ನಿಟ್ಟುಸಿರಿಟ್ಟು ಹೇಳಿದಳು.

"ಹಾಗಾದರೆ ರಾಜೀವ, ನೀನು ಮೊದಲೇ ಆಯ್ಕೆ ನಡೆಸಿರುವೆ. ಅದು ಅರ್ಹತೆಯ ಆಧಾರದ ಮೇಲಲ್ಲ ನಿನ್ನ ಪ್ರಿಜುಡಿಸ್ ಆಧಾರವೇ ಅದಕ್ಕೆ ಆಧಾರ."
ರಾಜೀವ ಹೇಳಿದ "ಷಟಪ್. ನೀನು ನಿನ್ನ ಆಯ್ಕೆಯೇ ತೀರ್ಮಾನಗಬೇಕೆಂದು ಪ್ರಭಾವ ಬೀರಲು ಬಂದಿರುವೆ. ಇದು ಮಂದಾರನನ್ನು disqualify ಮಾಡಲು ಸಾಕು, ಆದ್ದರಿಂದ ನಿನ್ನ ವ್ಯರ್‌ಪುಲಿಂಗ್ ನಿಲ್ಲಿಸಿ... ...."
ಪ್ರಭಾ ಮೊದಲಿನಂತೆ ನಕ್ಕು ಹೇಳಿದಳು.
Nothing of that sort. ಇದೊ ಪಟ್ ಶಿವು ಈ ಚೀಟಿ ಕೊಟ್ಟಿದ್ದಾನೆ. ಆದದ್ದು ಆಯ್ತು. excuse me, best wishes"
ರಾಜೀವ. ಪ್ರಭಾ ಕೊಟ್ಟ ಕವರ್ ತೆಗೆದುಕೊಂಡು ಆತುರದಿಂದ ಅದನ್ನು ಹರಿದು ಓದಿದ.
"ರಾಜೀವ, emergency ಆರ್ಕೆಡಕ್ಟ್ ಬಳಿ ಬಾ. ಹೆಚ್ಚಿನ ವಿಷಯ ಮೊಖ್ತಾ."
"ಪ್ರಭಾ ಏನಿದು ? ಎಂದು" ರಾಜೀವ ಕೂಗಿಕೊಂಡ. ಉತ್ತರವಿಲ್ಲ. ಮುಖವೆತ್ತಿ ನೋಡಿದರೆ ಪ್ರಭಾ ಸರಸರನೆ ನಡೆದು ಹೋಗುತ್ತಿದ್ದಾಳೆ.

"ಏನೋ ರೋಗ ಬಂತು ಇವನಿಗೆ" ಎಂದು ರಾಜೀವ ಒಲ್ಲದ ಮನಸ್ಸಿನಿಂದ ಆ್ಯಕೆಡೆಕ್ಟ್ ಬಳಿಗೆ ಸರಸರನೆ ಹೊರಟ. ಅವನ ಪಯಣದ ದಿಕ್ಕನ್ನು ಗುರುತಿಸಿ ಪ್ರಭಾಗೆ ಆನಂದವಾಯಿತು. ಅವಳು ಹ್ಯಾಲೆಟ್ ಬಳಿಗೆ ಹೋಗಿ ರಾಜೀವನಿಗೆ ಆಚೀಟಿ

ತಂದಿದ್ದಳು. ಅವಳು ಹ್ಯಾಂಲೆಟ್‌ಗೆ ಹೇಳಿದ್ದು ಇಷ್ಟೇ.

"ಶಿವು ಡಿಯರ್, ರಾಜೀವನಿಗೆ ಸಂಗೀತದ ಗಂಧವಿಲ್ಲ. ಅವನು ಮಂದಾರ ಈ ಭಾವಗೀತೆಯನ್ನು ಹೇಳುವುದನ್ನೇ ಕೇಳಿಲ್ಲ. ಆದರೆ ಈಗ ಅವನು ಅಕ್ವೆಡಕ್ಟ್ ಬಳಿಗೆ ಬಂದರೆ ಅಲ್ಲಿ ಮಂದಾರ ರಿಹರ್ಸಲ್ ಮಾಡ್ತಾ ಇರ್ತಾಳೆ. ಒಮ್ಮೆ ರಾಜೀವ ಅದನ್ನು ಕೇಳಿದರೆ ಮಂದಾರನ ಅರ್ಹತೆಗೆ ಪುರಸ್ಕಾರ ದೊರೆತೀತು."
ಬಲೆಗೆ ಬಿದ್ದ ಹ್ಯಾಂಲೆಟ್ ಆ ಚೀಟಿಯನ್ನು ಬರೆದು ಪ್ರಭಾಗೆ ಕೊಟ್ಟಿದ್ದ.

* * *

ಬಣವೇಕಲ್ಲಿನ ಬೋಳುಮರಡಿಯ ಕೆಳಗಿರುವ ಭಾರೀ ಗುಂಡಿಯಲ್ಲಿದೆ. ಆಕ್ವೆಡಕ್ಟ್. ಅಲ್ಲಿಂದ ಕೆಳಗೆ ಎರಡು ಮೈಲಿಗಳಾಚೆ ಈ ನಾಲೆಯ ನೀರು ಹೊಲಗಳಿಗೆ ಸಿಗುತ್ತದೆ. ಬಣವೆಕಲ್ಲಿಗೆ ಕೆಟ್ಟ ಬಿಸಿಲು ಧಗೆ ತಪ್ಪಲಿಲ್ಲ ಅಲ್ಲಿನ ಹೊಲಗಳಿಗೆ ಈಶಾನ್ಯ ನೈರುತ್ಯ ಮಾನ್ಸೂನುಗಳೆರಡೂ ಮಳೆ ತರುವುದಿಲ್ಲ. ಈ ಆಕ್ವೆಡಕ್ಟ್ ಬಣವೆಕಲ್ಲಿಗೆ ನೀರು ಕುಡಿಸುತ್ತದೆ ಅಷ್ಟೇ.

ಬೋಳುಮರಡಿಯಿಂದ ಆಕ್ವೆಡಕ್ಟಿಗೆ ಮೆಟ್ಟಿಲುಗಳಿವೆ. ಸುತ್ತಲೂ ಕೆಲವು ಬಳ್ಳಾರಿ ಜಾಲಿಯ ಗಿಡಗಳು. ಅಲ್ಲೊಂದು ಕಡೆ ಆಕ್ವೆಡಕ್ಟಿಗೆ ಕಲ್ಲಿನ ಸೋಪಾನಘಟ್ಟ. ಮೆಟ್ಟಿಲುಗಳ ಪಕ್ಕದಲ್ಲಿ ಒಂದು ಗುಡಿಸಲು. ಬಣವೇಕಲ್ ಕಾಲೇಜಿನ ಇತಿಹಾಸಕಾರರ ಅಭಿಪ್ರಾಯದಂತೆ ಅಲ್ಲಾವುದ್ದೀನನ ಅದ್ಭುತ ದೀಪದಲ್ಲಿದ್ದ ಪಿಶಾಚಿ ಆ ಗುಡಿಸಲಿನಲ್ಲಿ ವಾಸವಾಗಿದೆಯಂತೆ. ಆದರೆ ಸ್ಥಳೀಯ ಗಂಧದ ಮರದ ಕಳ್ಳಸಾಗಣೆದಾರರು ಅಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ ಎಂದು ಇನ್ನು ಕೆಲವರ ವಾದ.

ಮಂದಾರ ಕೈಯ್ಯಲ್ಲಿ ಒಂದು ಬುಟ್ಟಿಯನ್ನು ಹಿಡಿದುಕೊಂಡು ಆಕ್ವೆಡಕ್ಟ್ ಕಡೆಗೆ ಹೋದುದನ್ನು ಮ್ಯಾಕ್‌ಬೆತ್ ನೋಡಿದ. ಐದು ನಿಮಿಷಗಳನಂತರ ರಾಜೀವನೂ ಆ ಹಾದಿಯನ್ನು ಹಿಡಿದು ಹೋದ.

ಮ್ಯಾಕ'ಬೆತ' ಕೈಯಲ್ಲಿ ನಾಲ್ಕಾರು ಪತ್ರ ಪುಸ್ತಕಗಳನ್ನೂ ಒಂದು ಡಜ಼ನ್ ಬಿಳಿ ಕಾಗದವನ್ನೂ ಹಿಡಿದು ಪ್ರಿನ್ಸಿಪಾಲರ ಮನೆಗೆ ಹೋದ. ಅಲ್ಲಿ ಪ್ರಿನ್ಸಿಪಾಲರು ಪ್ರೊ। ಶೇಖರ' ಹಾಗೂ ಬೊಬ್ಬಯ್ಯ ಇವರೊಡನೆ ಮಾತನಾಡುತ್ತಿದ್ದರು. ಮ್ಯಾಕ್ಬೆತ' ಸಿಟ್ಟಾಗಿ ಕೂಗಿದ
'ಭಾರೀ ಅನ್ಯಾಯ ಸರ', ನಾವೆಲ್ಲಾ ಇಲ್ಲಿ ಟೆಸ್ಟ್‌ಗಾಗಿ ಪ್ರಿಪೇರ' ಆಗ್ತಾ ಇದೀವೆ, ನೀವು ಟೆಸ್ಟ್ ಕೊಡಲು ಬರಲಿಲ್ಲ. ನಾನು ಹೇಳಿದೆನಲ್ಲ ರಾಜೀವ, ಮಂದಾರ ಮಾತ್ರ ಆಕ್ವೆಡಕ್ಟಿಗೆ ಹೋಗಲಿ, ಹ್ಯಾಂಲೆಟ' ಪುಸ್ತಕವನ್ನು ಮುಟ್ಟುವುದೇ ಬೇಡ."
ಪ್ರಿನ್ಸಿಪಾಲರು ರೇಗಿ "ಪ್ಲೀಸ್ ಗೆಟೌಟ್ ಈದಿನ ಟೆಸ್ಟ್ ಇಲ್ಲ" ಎಂದರು.
ಮ್ಯಾಕ್ಬೆತ್ ಹೇಳಿದ "ಹೀಗೇ ಅಂತ ಗೊತ್ತಿದ್ದರೆ ಮೊದಲೇ ನಾವು ಪ್ರ್ಯಾಕ್ಟೀಸ' ಮಾಡಿ ಕೊಂಡು ಇರುತ್ತಿದ್ದೆವಲ್ಲ."

ಪ್ರಿನ್ಸಿಪಾಲರು "ಅಟೆಂಪ್ಟೆಡ' ಮರ್ಡರ' ಛಾರ್ಜ್ ನಿನ್ನ ಮೇಲೆ ಬೀಳುವುದನ್ನು ತಪ್ಪಿಸಿದ್ದೇನೆ ಸಾಲದೇ" ಎಂದರು.

ಮ್ಯಾಕ್ಬೆತ' ತನ್ನ ಯತ್ನ ಬಿಡಲಿಲ್ಲ. "ಸಾರ', ಇಲ್ಲಿ ಕೇಳಿ ರಾಜೀವ ಈ contest ನಡೆಸೋನು ಮಂದಾರ ಅವನು ಈಗ ಆಕ್ಸಿಡಕ್ಟ್ ಬಳಿಗೆ ಹೋಗಿದ್ದಾರೆ. ಇದು ಇನ್ಫ್ಲುಯೆನ್ಸಿಂಗ್ ಅಲ್ಲವೇ ? ನಾನು ಹೇಳಿದರೆ ನೀವು ಕೇಳಲಿಲ್ಲ."

* * *

ಕಾಲೇಜಿನ ರಸ್ತೆ ಬೋಳುಮರಡಿಯನ್ನು ಬಲ ಭಾಗದಲ್ಲಿ ಸುತ್ತು ಹಾಕುವ ತಿರುವಿನಲ್ಲಿ ರಾಜೀವ ಬರುತ್ತಿದ್ದ. ಅವನ ಹಿಂದೆ ಕಾರು ಬಂದು ನಿಂತಿತು. ರಾಜೀವ ದಿಗ್ಭ್ರಮೆಗೊಂಡು ನಿಂತ. ಪ್ರೊ। ಶೇಖರ' ರಾಜೀವನನ್ನು ಕರೆದರು.

"ರಾಜೀವ, ಟೈಂಆಯ್ತು. ನಾವಿಬ್ಬರೂ ಬರುವುದಿಲ್ಲ, ನೀನೇ ಕಂಡಕ್ಟ್ ಮಾಡು contest ಅಂದರೆ ನೀನು ಇಲ್ಲೇಕೆ ಬಂದೆ ?" ಎಂದು ಕೇಳಿದರು.

ಪ್ರಿನ್ಸಿಪಾಲರು ನಿಧಾನವಾಗಿ ಕಾರಿನಿಂದಿಳಿದು ಆಕ್ಸಿಡಕ್ಟಿನ ಕಡೆಗೆ ಹೊರಟು ಹೋದರು.

"ಸರ' ...."ರಾಜೀವ ಏನೋ ಹೇಳಲು ಹೊರಟ.

ಶೇಖರ' "ನೀನೇನು ಹೇಳಬೇಡ. ಇಲ್ಲಿ ಬಂದು ನನ್ನ ಪಕ್ಕದಲ್ಲಿ ಕುಳಿತುಕೋ" ಎಂದರು.

"ಪ್ರಿನ್ಸಿಪಾಲರು ಎಲ್ಲಿಗೆ ಹೋದರು.?"

"ರಾಜೀವ, ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆ. ಎಂ.ಶಿವು ಚಾಡಿಯಿಂದ ಈಗ ನಾವು ಇಲ್ಲಿಗೆ ಬರುವಂತಾಯಿತು. ಆನ್ಗ್ಲೊರಾಸ್ ಕಂಪನಿಯ ಎಂ. ಡಿ. ಇವೊತ್ತು ಸಂಜೆ ಬರುವುದಾಗಿ ಫೋನ್ ಮಾಡಿದ್ದಾರೆ...'

"ಹಾಗಾದರೇನು ಸಾರ'..."

"ಸಾರಿ, ಮೀಟ' ಮಿ. ವಾಸು ಬಬ್ಬರ್ಯರ್, ಆಥರ'" rather poet of the lyric."

"ಯಾವ ಲಿರಿಕ' ?"

"ಬಂದೆ ಗೆಳತಿ ..... etc"

ರಾಜೀವ ಆಶ್ಚರ್ಯದಿಂದ ಬಾಯಿ ಬಿಟ್ಟು ವಾಸು ಕೈಯನ್ನು ಕುಲುಕಿದ. ಕನ್ನಡದಲ್ಲಿ ಭಾವಗೀತೆಗಳೆಲ್ಲಾ ಹಿಂಜರಿತಕ್ಕೆ ಸಿಕ್ಕಾಗ ಇಂತಹ ಘನಗೀತೆಯನ್ನು ರಚಿಸಿದ ಕವಿಯನ್ನು ಭೇಟಿಮಾಡುವುದು ಅವನಿಗೆ ಅಪೂರ್ವ ಲಾಭವೆಂದೆನ್ನಿಸಿತ್ತು.

ವಾಸು ನಕ್ಕು ಹೇಳಿದ "ಪ್ರೊಫೆಸರ', ಈ ಜೋಕು ಇಲ್ಲಿಗೇ ಸಾಕು. ನಾನು ಯಾವ ಲಿರಿಕ'ನೂ ಬರೆದಿಲ್ಲ. ಶೇಖರ' ಹೇಳಿದರು. "ಹ್ಯಾಂಲೆಟ' ಹೇಳುತ್ತಿದ್ದ ಇದು ಕನ್ನಡದ finest ಲಿರಿಕ'ಗಳಲ್ಲಿ ಒಂದಂತೆ. ಇದನ್ನು ಬರೆದವನು ನೀನೇ ಅಂತ ಹೇಳಿದ್ದು ಪ್ರಿನ್ಸಿಪಾಲರೇ, ಹೀಗಾಗಿ ನೀನು ನಿನ್ನ ಯೋಗ್ಯತೆಗೆ ತಕ್ಕ ಪುರಸ್ಕಾರವನ್ನು ದೇಶದಿಂದಲ್ಲದಿದ್ದರೂ, ಅಭಿಮಾನಿಗಳಿಂದಾದರೂ ಪಡೆಯಲೇಬೇಕು. ಮೋರೋವರ' ರಾಜೀವ, ವಾಸು ಮಾಡಿರುವ ಶೋಧದಿಂದ ಅವನು ಇಷ್ಟರಲ್ಲಿಯೇ ಅಂತರ

ರಾಷ್ಟ್ರೀಯ ಖ್ಯಾತಿ ಪಡೆಯಲಿದ್ದಾನೆ. ಆದರೆ ಹಿತ್ತಿಲ ಗಿಡ ಮದ್ದಲ್ಲ ಪೋಲಾಳ್ವ ಯೂನಿವರ್ಸಿಟಿಯಲ್ಲಿ ಇವನಿಗೊಂದು ಸೆಕೆಂಡ'ಕ್ಲಾಸ' ಮಾಸ್ಟರ್ಸ್ ಡಿಗ್ರಿ ಸಿಗುವುದೂ ಅನುಮಾನ...."

* * *

ಅಕ್ಕಡಕ್ಕಿನ ಆಚೆಯಿದ್ದ ಜಾಲಿಮರಗಳ ಮೇಲೆ ಮೂಡಿದ್ದ ಒಂದು ಕರಿಮೋಡ, ತುಂಡು ತುಂಡುಗಳಾಗಿ ಹರಿದು ಹಂಚಿ ಆಕಾಶವನ್ನೆಲ್ಲಾ ಆವರಿಸಿತ್ತು. ನಡು ಹಗಲಿನಲ್ಲಿ ಮಿಂಚು ಕಾಣಿಸಿತು, ಅರೆಮನಸ್ಸಿನ ಒಂದು ಸಿಡಿಲೂ ಬಡಿಯಿತು. ಪೂರ್ವದಿಂದ ಗಾಳಿ ಬಿರುಸಾಗಿ ಬೀಸಿ, ಗೋಲಿಯಗಾತ್ರದ ಹನಿಗಳು ಬೀಳಲಾರಂಭಿಸಿದವು. ಮಂದಾರ ಬೆದರಿ ಅಲ್ಲಾವುದ್ದೀನನ ಪಿಶಾಚಿಯ ಗುಡಿಸಿಲಿನೊಳಕ್ಕೆ ಹೋದಳು. ಇತ್ತ ರಾಜೀವನೂ ಬರಲಿಲ್ಲ ಮಳೆ ಆರಂಭವಾಗಿ ಅತ್ತ ಸ್ಪರ್ಧೆಯೂ ಇಲ್ಲ, ಮೆಟ್ಟಿಲ ಬಳಿಗೆ ಯಾರೋ ಬರುವ ಕಾಲುಸಪ್ಪಳ ಕೇಳಿ ಮಂದಾರ ಗುಡಿಸಿಲಿನಿಂದ ಇಣುಕುವ ವೇಳೆಗೆ ಕೋಲುಮಿಂಚು, ಸಿಡಿಲು ಹತ್ತಿರವಲ್ಲೇ ಕಾಣಿಸಿ ಆವಳು ಪೂರ ಬೆದರಿ ಗುಡಿಸಿಲಿನೊಳಕ್ಕೆ ಹೋದಳು. ಮೋಡ ಮುಚ್ಚಿ ಗುಡಿಸಿಲಿನಲ್ಲಿ ಪೂರ್ಣ ಕತ್ತಲು ಕಾಲು ಸಪ್ಪಳ ಗುಡಿಸಲ ಬಾಗಿಲವರೆಗೆ ಬಂದು ತಟ್ಟನೆ ನಿಂತಿತು. ಹತ್ತಿರವೇ ಗುಡುಗಿದ ಸದ್ದು

'ಮಂದಾರ' ಎಂದ ದನಿ.

'ರಾಜೀವ, ಬಾ ಇಲ್ಲಿ ನನಗೇಕೊ ಭಯ.'

ಹೊರಗೆ ಜೋರಾಗಿ ಗುಡುಗಿದ ಸದ್ದು.

'ಹೂಂ' ಎಂದ ಹಾಗಾಯಿತು ರಾಜೀವ. ಮಂದಾರನಿಗೆ ಭಯವಾಯಿತು, ಅದ್ಭುತ ದೀಪದ ಪಿಶಾಚಿಯೇನಾದರೂ ಹೊರಗೆ ಹೋಗಿದ್ದು ಒಳಗೆ ಬರಲು ಕಾಯುತ್ತಿದೆ ಎಂಬ ಅನುಮಾನ ಅವಳಿಗೆ.

"ರಾಜೀವ, ನೀನು ಬಾಲ್ಯದ ಗೆಳೆಯ. ನೀನು ಹೀಗೆ ತಟಸ್ಥನಾಗಿಲ್ಲದಿದ್ದರೆ ನಿನ್ನನ್ನೇ ಲವ್ ಮಾಡುತ್ತಿದ್ದೆ"

ರಾಜೀವ ಒಂಟಿ ಸೀನು ಸೀನಿದ.

"ಇದು ನನಗೆ ಮೋಸ್ಟ್ ಇಂಪಾರ್ಟೆಂಟ', ಭಯದಿಂದ ಗೀತೆ ಹಾಡಲಾರೆ. ಮಳೆಯಿಂದ ಕಾಲೇಜಿಗೆ ಹೋಗಲಾರೆ, ರಾಜೀವ, ಇದೊಂದು ಛಾನ್ಸ್‌ಕೊಡು. ನೀನು ಒಪ್ಪಿದರೆ ಹ್ಯಾಂಲೆಟ'ನನ್ನು ಜೋಡಿ ಮಾಡಿಕೊಳ್ಳುತ್ತೇನೆ. ನನಗೆ ಸಿನಿಮಾ ಛಾನ್ಸ್ ಸಿಗುತ್ತೆ, ಯೂನಿವರ್ಸಿಟಿ ಪ್ರೈಸ' ಸಿಕ್ಕರೆ ಒಳ್ಳೇ ಪಬ್ಲಿಸಿಟಿಯೂ ಇರುತ್ತೆ, ಇದೊಂದು ಛಾನ್ಸ್ ರಾಜೀವ, ನೀನು ಕೇಳಿದ್ದು ಕೊಡುತ್ತೇನೆ."

ಇದ್ದಕ್ಕಿದ್ದಂತೆ ಆರಂಭವಾಗಿದ್ದ ಮಳೆ ನಿಂತೇಬಿಟ್ಟಿತು, ಬಣವೇಕಲ್ಲು ತನಗೆ ಸರಿಯಾದ ಜಾಗವಲ್ಲ ಎಂದುಕೊಂಡು ಮೋಡಹಾರಿಹೋಗಿ, ಬಿರುಬಿಸಿಲು ಬಂತು. ಮಂದಾರ ನೋಡಿದಳು ಬಾಗಿಲಿನಲ್ಲಿದ್ದವ ರಾಜೀವನಲ್ಲ ಪ್ರಿನ್ಸಿಪಾಲ್ ವೆಂಕಟಪ್ಪನವರು ಓ ಭೂದೇವಿ ನೀನು ಬಾಯ್ತೆರೆದು ನನ್ನನ್ನು ನುಂಗು 'ಎಂದಳು ಮಂದಾರ, ಅವಳೇನಾದರೂ ಸೀತಾದೇವಿಯಾಗಿದ್ದಿದ್ದರೆ ಭೂದೇವಿ ಕೇಳುತ್ತಿದ್ದಳೋ ಏನೋ ?

ಸ್ವಯಂವಧು

—ಶಿವಕುಮಾರ'

ಅಪ್ಪ : "ಬಾಳ ಸಖಿಯನು ಅರಸ ಹೊರಟರೆ
ಕೇಳು ನನ್ನಯ ಅನುಭವ
ಮಡದಿ, ರೂಪದಿ ರತಿಯ ಮೀರಲಿ
ಬೇಡ ವಿದ್ಯಾಶಾರದೆ.
ತರುಣಿ ಸುಂದರಿ ತಣಿಸಬಲ್ಲಳು
ರೂಪ ಪ್ರಖರತೆಯಿಂದಲಿ
ಬಾಳ ಹಾದಿಗೆ ಬೆಳಕ ಬೀರುತ
ನಿನ್ನ ತಾಯಿಯ ಪರಿಯಲಿ" ||೧||

ಅಮ್ಮ : "ಹೊಗಳಿ ಹೊಗಳಿ ಹೊನ್ನ ಶೂಲಕೆ
ಏರಿಸುವರೀ ರಾಯರು
ಗುಣವನಾರಿಸು, ಎಲ್ಲ ಕಾಲಕೆ
ರೂಪವೊಂದೇ ಸಾಲದು" ||೨||

ಚಿಕ್ಕಪ್ಪ : "ಮೊದಲು ಹಣವೆಷ್ಟಿಹುದು ಮಾವಗೆ
ಎಂದು ತಿಳಿಯುವ ಜಾಣನು
ಜೀವನದ ಸಂಗ್ರಾಮ ಕಿಳಿಯುವ–
ಮೊದಲು ಆಯುಧ ಪಡೆದನು
ನೋಡು ನಿನ್ನಯ ಅತ್ತೆ, ಸಾಕ್ಷಾತ್
ಲಕ್ಷ್ಮಿಯಂದದಿ ಇರುವಳು
ದೇವನಂಥ ಸುಯೋಗ ನಿನಗೂ
ನೀಡಲೆನ್ನುವೆ ಹರಸುವೆ" ||೩||

ಚಿಕ್ಕಮ್ಮ : "ಒಪ್ಪಿದೆ, ಹಣವನಾವ ಜಾಣನು
ಕಸದ ಬುಟ್ಟಿಗೆ ಎಸೆಯನು
ಅದಕು ಮಿಗಿಲಿದ ಶಕ್ತಿಯೊಂದಿದೆ
ಮಾವ ಬೀರುವ ಇನ್‌ಫ್ಲುಯೆನ್ಸ್
ಮಾತು ಮಾತಿಗೂ ಮಿಸಲಾತಿ
ಜಾತಿ ಯಾವುದು ಕುನ್ನಿಯೇ?
ಎಂಥ ಕೆಲಸ, ಯಾವ ಕಾರ್ಯಕು
ಬೇಕು ಒಂದೇ ಇನ್‌ಫ್ಲುಯೆನ್ಸ್!" ||೪||

ನಾನೂ ಕೇಳಿದೆ ಎಲ್ಲ ಹಿರಿಯರ
ಹರಕೆ ಹಾಗೂ ಹಿತನುಡಿ
ಒಪ್ಪಿದರೂ ಈ ಎಲ್ಲ ಮಾತಿನ
ಜಾಣ್ಮೆ ಹಾಗೂ ಅನುಭವ
ಪ್ರೇಮವಿಲ್ಲದ ಬಾಳದೆಂಥದು
ಥಂಡ ಇಲ್ಲದ ಬಿಯರದು !.... ॥೫॥

ಕೊನೆಗೂ ಹುಡುಕಿದೆ, ಗೆದ್ದೆ ನಾನು
ನನ್ನ ಪ್ರೇಮದ ಹುಡುಗಿಯು !
ತಾವರೆಯ ಹೊಸ ಕೆಂಪು ಅಲ್ಲದೆ
ಇಹುದು ಎಂ.ಎ. ಡಿಗ್ರಿಯೂ
ಅಪ್ಪ, ಅಮ್ಮ, ಅತ್ತೆ ಇತರರು
"ಹೇಳಲಿಲ್ಲವೆ ಆಗಲೇ"
ಎಂದು ಹೇಳುವ ಮೊದಲೆ ಓಡುವೆ
ಮಂತ್ರಿಗಳ ಮಗಳೊಂದಿಗೆ!.... ॥೬॥

ಗುಂಡಮ್ಮ ಕಥಾ

– ಶೀನಾ

ನನ್ನ ಎಡಗಣ್ಣಿನ ಹುಬ್ಬಿನ ಮೇಲೆ ರೂಪಾಯಿ ಗಾತ್ರದ ಒಂದು ಗಾಯವಾಗಿದೆ. ಆ ಕತೆಯೇ ಈ "ಗುಂಡಮ್ಮ ಕಥ". ಅದು ನಡೆದದ್ದು ಹೀಗೆ.

* * * * *

ಅಂದು ಎಂದಿನಂತೆ ಸಂಜೆ ಕೆಲಸದಿಂದ ಮನೆಗೆ ಮರಳಿದಾಗ ನನ್ನ ಭಾರ್ಯ ಗಜಲಕ್ಷ್ಮಿ ಗುಂಡಮ್ಮ ಎಂದಿನಂತೆ ಗಂ.ಮೋ. (ಗಂಟು ಮೋರೆ) ಆಗಿರದೇ ಕುಲುಕುಲು ನಗುತ್ತಾ, ಕೈಯಲ್ಲಿ ಘಮಘಮಿಸುವ ಹಬೆಯಾಡುವ ಅವರೇಕಾಳು ಉಪ್ಪಿಟ್ಟನ್ನು ತಟ್ಟೆಯಲ್ಲಿಟ್ಟು ಬೇಲೂರು ಭಂಗಿಯಲ್ಲಿ ನಿಂತಿದ್ದಳು. ಏನೋ ಗಂಡಾಂತರ ಕಾದಿದೆಯೆಂದು ಜಾಗರೂಕನಾದೆ. ಉಪ್ಪಿಟ್ಟಿಗಾಗಿ ಜೀವ ಹಾತೊರೆಯುತ್ತಿದ್ದರೂ ತೋರಗೊಡದೇ ಅಂದಿನ ಪೇಪರನ್ನು ಮುಖಕ್ಕೆ ಅಡ್ಡಲಾಗಿ ಹಿಡಿದು ಕುಳಿತೆ.

"ತಕ್ಕೊಳ್ಳೀ ಉಪ್ಪಿಟ್ಟು" ಬೇಲೂರಿನ ಧ್ವನಿ.

"ಯಾಕೇ?" ಎಂದೆ.

"ಇದೇನ್ರೀ ನಿಮ್ಮ ಪ್ರೀತಿಯ ಅವರೇಕಾಳು ಉಪ್ಪಿಟ್ಟು ಮಾಡಿದ್ದೀನಿ, ಯಾಕೇ ಅಂತೀರಲ್ಲಾ"

"ಮೊದಲು ವಿಷಯ ಏನು ಹೇಳೇ" ಎನ್ನುತ್ತ ನಾನು ಉಪ್ಪಿಟ್ಟಿಗೆ ಕೈಚಾಚಿದೆ ಹೇಗೂ ತಿಂಡಿಯನ್ನಂತೂ ಕೆಡಿಸಬಾರದಲ್ಲವೇ...ಇನ್ನೇನು ಒಂದು ಚಮಚ ಬಾಯಿಗೆ ಹಾಕಬೇಕು ಅಷ್ಟರಲ್ಲಿ ನಿರ್ದಯೀ ಬೇಲೂರು ಅಂದಿನ ಅವರೇಕಾಳನ್ನು ಒಡೆಯಿತು.

"ನೋಡ್ರೀ "ಸ್ತ್ರೀ ಕಂಠ" ಮಹಿಳಾ ಮಾಸ ಪತ್ರಿಕೆಯವರು ಏರ್ಪಡಿಸಿದ ಕಥಾ ಸ್ಪರ್ಧೆಗೆ ಒಂದು ಸಣ್ಣ ಕತೆ ಬರೀತಾ ಇದ್ದೀನಿ... ಸ್ವಲ್ಪ, ಕೇಳ್ತೀರಾ..."

"ನನಗೆ ಉಪ್ಪಿಟ್ಟು ಬೇಡಾ" ಎನ್ನುತ್ತ ಏಳಲನುವಾದೆ.

"ಸಾಕು ಸುಮ್ನೇ ತಿನ್ರೀ, ಕಂಡಿದೀನಿ" ....ಒದರಿತು ಸ್ತ್ರೀ ಕಂಠ.

ಸರಿ ಇನ್ನು ಗತ್ಯಂತರವಿಲ್ಲೆಂದು ತಲೆ ಕೆಳಗೆಮಾಡಿ ಉಪ್ಪಿಟ್ಟು ತಿನ್ನತೊಡಗಿದೆ. ಕಥಾ ವಾಚನ ಪ್ರಾರಂಭವಾಯಿತು.

"ಸುಮ, ರಮ, ಪೋರ್ಟಿಕೋದಲ್ಲಿ ಗುಲಾಬೀ ರಂಗಿನ ಗುಲ್‌ಮೋಹರ ಬಳಿ ನಿಂತಾಗ ಹೊಸ ಹರೆಯದ ತರುಣನೊಬ್ಬ ಬಜಾಜ್ ಸ್ಕೂಟರಿನಲ್ಲಿ ಭರ್ರನೇ ಬಂದಿಳಿದ. ಆ ತರುಣನೇ ಸುಮ, ರಮರ ಕಣ್ಮಣಿ ಅರುಣ.

ಅರುಣನದು ಗುಂಗುರು ಗೂದಲು, ಹರವಾದ ಎದೆ, ಮಾದಕ ಕಣ್ಣುಗಳು,

ನೀಳ ನಾಸಿಕ, ಆಪಸ ಬಾದಾಮೀ ವರ್ಣದ ಮುಖದ ಮೇಲೆಲ್ಲ ತೊನೆಯುತ್ತಿರುವ ಗುಂಗುರು ಗುಂಗುರು ಜೇನಿನ ಬಣ್ಣದ ಕೂದಲು......." —ಇತ್ಯಾದಿ ಇತ್ಯಾದಿ.

ಉಪ್ಪಿಟ್ಟು ಗಂಟಲಿನಲ್ಲಿಳಿಯುವುದೇ ಕಷ್ಟವಾಯಿತು. ಉಪ್ಪಿಟ್ಟಿನ ತುಂಬೆಲ್ಲ ಕಥಾನಾಯಕನ ಕೂದಲೇ ಕೂದಲು. ನನ್ನ ಕಷ್ಟವನ್ನರಿತೋ ಏನೋ ಗುಂಡಮ್ಮ ಒಂದು ಲೋಟ ನೀರು ಕೈಗಿತ್ತು ಕೇಳಿದಳು ಬಿಂಕದಲಿ.

"ಹ್ಯಾಗಿದ್ದೇರಿ ಶೈಲಿ? ಹ್ಯಾಗೆ ಕಾಣ್ತಾನೆ ಕಥಾನಾಯಕ ಅರುಣ?"

"ಒಳ್ಳೇ ಹೈದರಾಬಾದೀ ಹಿಜಡಾನ ತರಾ ಕಾಣ್ತಾನೇ..." ನಾನು ತಾಳಲಾರದೇ ಕಿರುಚಿದೆ...." ಅಲ್ವೇ ಗಂಡು ಗಂಡಿನ ಹಾಗಿರೋದು ಬಿಟ್ಟು, ಗುಂಗರು ಗುಂಗರೂ, ಮಾದಕ ಕಣ್ಣು, ಹೊರವಾದ ಎದೆ ಎಲ್ಲ ಇದ್ದರೆ ಇನ್ನ್ಯಾಗೆ ಕಾಣ್ತಾನೆ ನಿನ್ನ ತರುಣ ಅರುಣ" ...ಎಂದೆ.

ಸಾಕು ಸುಮ್ನಿರಿ. ಗಂಡಸು ಎಂದ ಮಾತ್ರಕ್ಕೆ ಎಲ್ಲರೂ ನಿಮ್ಮ ಹಾಗೇ ಘಟೋತ್ಕಚನ ಹಾಗೇ ಇರಬೇಕೆಂಬ ನಿಯಮವೇ" ಎಂದು ಗುಂಡಮ್ಮ ಗುಡುಗಿದಳು.

"ಸರಿ, ಹೇಮಮಾಲಿನಿಗೆ ಮೀಸೆ ಇಡು ನನ್ನದೇನು ನಮ್ಮಪ್ಪನ ಮನೆ ಗಂಟ್ಟು ಹೋಗ್ತದೇ" ಎನ್ನುತ್ತ ಮತ್ತೆ ಉಪ್ಪಿಟ್ಟಿನ ಕಡೆ ಹೊರಳಿದೆ.

ನನ್ನ ಭಾರ್ಯೆ ಗುಂಡಮ್ಮ ಪಾಕಶಾಸ್ತ್ರ ಪ್ರವೀಣೆ. ಅದರಲ್ಲಿಯೂ ಅವಳ ಅವರೇಕಾಳು ಉಪ್ಪಿಟ್ಟಿನ ಖ್ಯಾತಿ ಕ್ಯಾತ್ಸಂದ್ರದಿಂದ ಕ್ಯಾರಕೊಪ್ಪದವರೆಗೆ ಹಬ್ಬಿದೆ.

ಎಷ್ಟೋ ಸಲ ಅವರೇ ಉಪ್ಪಿಟ್ಟಿನ ಆಮಿಷಕ್ಕೆ ಎಂತೆಂತಹ ಶಿಕ್ಷೆಯನ್ನು ಅನುಭವಿಸಿದ್ದೇನೆ.

ಒಮ್ಮೆ ನನ್ನ ಹಿಡಿಂಬಾ ಸದೃಶ ಅತ್ತೆಗೆಂದು ಆರು ಸೇರು ಅವಲಕ್ಕಿ ಕುಟ್ಟಿಕೊಟ್ಟಿದೇನೆ... ಉಪ್ಪಿಟ್ಟಿಗಾಗಿ

ಇನ್ನೊಮ್ಮೆ ದನದ ಕೊಟ್ಟಿಗೆಯನ್ನೆಲ್ಲ ಶೆಗಣಿ ನೀರಿನಿಂದ ಸಾರಿಸಿಕೊಟ್ಟಿದ್ದೇನೆ... ಉಪ್ಪಿಟ್ಟಿಗೆಂದು.

ಮಗದೊಮ್ಮೆ ನನ್ನ ಹಯವದನ ಬೀಗನನ್ನು ಸ್ಕೂಟರಿನ ಹಿಂದೆ ಹಾಕಿಕೊಂಡು ಊರೆಲ್ಲ ಸುತ್ತಿಸಿ ಬಂದಿದ್ದೇನೆ... ಉಪ್ಪಿಟ್ಟಿಗೋಸ್ಕರ.

ಅಂತೂ ಅವರೇಕಾಳು ಉಪ್ಪಿಟ್ಟಿನ ಆಶೆಗೋಸ್ಕರ ಏನೇನೋ ಮಾಡಿದ್ದೇನೆ. ಆದರೂ ಅಂದೇಕೋ ಆ ಹೆಣ್ಮುಖದ ಅರುಣನ ಪ್ರೇಮ ಕತೆ ಅತೀ ಬೇಸರ ತರಿಸುತ್ತಿತ್ತು. ಆ ಶಿಕ್ಷೆಯನ್ನು ಬೇಗನೇ ಮುಗಿಸಿ ನಿಶ್ಚಿಂತೆಯಿಂದ ಅವರೇಕಾಳನ್ನು ಸವಿಯುವನೆಂಬ ಚಪಲಕ್ಕೆ ಬಿದ್ದು ಕೊನೆಗೆ ನಾನೇ ಹೇಳಿದೆ.

"ಲೇ ಕೇಳೆ ನಿನ್ನ ಮುಂದಿನ ಕತೆಯನ್ನು ನಾನೇ ಹೇಳುತ್ತೇನೆ ಕೇಳು" ಎಂದು ಪ್ರಾರಂಭಿಸಿದೆ....

"......ಸುಮ ಹದಿನಾರರ ಷೋಡಶಿ, ರಮ ಇಪ್ಪತ್ತರ ಷೋಡಶಿ; (ಗುಂಡಮ್ಮ

ನಾಲ್ಕೈತ್ತಾದರೂ ಮೊನ್ನೆ ಪೋಡಶಿಯಂತೆ ಬಳುಕಲು ಹೋಗಿ ಕಾಲು ಉಳುಕಿಸಿ ಕೊಂಡಿದ್ದಾಳೆ. ಒಟ್ಟಿನಲ್ಲಿ ಸ್ತ್ರೀಯರೆಲ್ಲ ಷೋಡಶಿಯರೇ). ಸುಮ ಅರುಣನ ಸೋದರ ಮಾವನ ಮಗಳು, ರಮ ಅವನ ಸೋದರತ್ತೆಯ ಮಗಳು. ಸುಮ ರಮ ಇಬ್ಬರೂ ಅರುಣನನ್ನು ಕಾಚಾ - ವಾಚಾ - ಮಂಚಾ - ಪ್ರೀತಿಸುತ್ತಿದ್ದಾರೆ. ಸುಮ ಸುಂದರಿ, ಗೌರವರ್ಣ, ನೀಳ ಕೇಶ, ಸಂಪಿಗೆಯಂತಹ ನಾಶಿಕ, ಇನ್ನೂ ಏನೇನೋ; ರಮ ಮೋಟು ಜಡೆ, ಮೊಂಡ ಮೂಗು ಸಾದುಗಪ್ಪು ಬಣ್ಣ.

ಸುಮಳ ತಂದೆ ಭರ್ಜರಿಯಾದ ಭಾರಿ ಶ್ರೀಮಂತರು. ರಮಳ ತಂದೆ ಬರೀ ಶ್ರೀಮಂತರು. ಸುಮಳಿಗೆ ಆರು ಕಾರು, ಮೂರು ಬಂಗ್ಲೆ, ಒಂಬತ್ತು ಜೂಲುನಾಯಿ ಗಳಿದ್ದರೆ, ಪಾಪ ರಮಳಿಗೆ ಮೂರು ಕಾರು ಎರಡೇ ಬಂಗ್ಲೆ ಏಳು ಜೂಲು ನಾಯಿ ಗಳು ಮಾತ್ರ.

ಅರುಣನಿಗೆ ತರುಣಿಯರಿಬ್ಬರೂ ತನ್ನನ್ನು ಪ್ರೀತಿಸುತ್ತಿರುವರೆಂದು ಗೊತ್ತು. ಆದರೆ ಇಬ್ಬರಲ್ಲಿ ಯಾರಿಂದ ಟೋಪಿ ಇಡಿಸಿಕೊಳ್ಳುವದೆಂಬುದೇ ಅವನ ಸಮಸ್ಯೆ...ಅಲ್ಲ ವೇನ" ಎಂದು ಗುಂಡಮ್ಮನೆಡೆ ತಿರುಗಿದೆ.

ಬಾಯಿ ಬಿಟ್ಟು ಕೇಳುತ್ತಿದ್ದ ಗುಂಡಮ್ಮ ಸಂತಸದಿಂದ

"ಹೌದುರೀ ನಿಜ, ನಿಜ. ಅರುಣ ಇಬ್ಬರಲ್ಲಿ ಯಾರನ್ನು ಮದುವೆಯಾಗು ತ್ತಾನೆಂಬುದೇ ಸಮಸ್ಯೆ" ಎಂದಳು,

ಈ ಮಧ್ಯೆ ನಾನು ಮತ್ತೆ ಉಪ್ಪಿಟ್ಟನ್ನು ಸವಿಯುತ್ತಿದ್ದೆ. ಅದೇ ಹುಮ್ಮಸ್ಸಿನಲ್ಲಿ ಮುಂಗ್ಗರಿಸಿದೆ,


"ಅದೇನೇ.... ತೀರ Simple ವಿಷಯ. ಸುಮ ಸುಂದರಿಯಾಗಿದ್ದರೂ ಅವ ಳಿಗೆ ಅಡುಗೆ ಮಾಡಲು ಬಾರದು. ರಮ ಕುರೂಪಿಯಾದರೂ ಒಳ್ಳೇ ಪಾಕಶಾಸ್ತ್ರ ಪ್ರವೀಣೆ, ಒಳ್ಳೊಳ್ಳೆ ಚಕಕವಳ ಎಲ್ಲ ಮಾಡುತ್ತಾಳೆ. ಆದ್ದರಿಂದ ಅರುಣ ಸುಂದರಿ ಯಾದ ಸುಮಳನ್ನು ಬಿಟ್ಟು ಮೋಟು ಜಡೆಯ, ಮೊಂಡ ಮೂಗಿನ, ಗಿಡ್ಡ ನಿಲುವಿನ' ಪಾಕ ನಿಪುಣೆ ರಮಳನ್ನೇ ಮದುವೆಯಾಗುತ್ತಾನೆ... ಉದಾಹರಣೆಗೆ ಈಗ ನಾನು ನಿನ್ನನ್ನು ಮದುವೆಯಾಗಿಲ್ವೇ... ಹಾಗೆ " ಎಂದು ಇನ್ನೂ ಹೇಳುತ್ತಿದ್ದೆ.

ಮರುಕ್ಷಣ ಗುಂಡಮ್ಮ ಉಗ್ರ ರೂಪತಾಳಿ.... ಬೇರೆಲ್ಲಾ ನಕ್ಷತ್ರಗಳು ಕಗ್ಗತ್ತಲು. ಎಚ್ಚರವಾದಾಗ ಆಸ್ಪತ್ರೆ.

* * * *

ಅದೇ ಗುಂಡಮ್ಮ ಕಥೆಯೋ ನನ್ನ ಜಣೆಯ ಬರಹದ ಕಥೆ.

"ನಗುವು ಸಹಜ ಧರ್ಮ : ನಗಿಸುವುದು ಪರಧರ್ಮ ।
ನಗುವ ಕೇಳುತ, ನಗುವುದತಿಶಯದ ಧರ್ಮ ॥
ನಗುವ, ನಗಿಸುವ, ನಗಿಸಿ ನಗುತ ಬಾಳುವ ವರವ ।
ಮಿಗೆ ನೀನು ಬೇಡಿಕೊಳೊ — ಮಂಕುತಿಮ್ಮ ॥"



ಶುಭಾಶಯಗಳೊಂದಿಗೆ—